**ಬೆಂಗಳೂರು ಪ್ರದೇಶ ಆಡಳಿತ ವಿಧೇಯಕ, 2009**

ಪರಿವಿಡಿ

**ಪ್ರಾಸ್ತಾವಿಕ - ಬೆಂಗಳೂರು ಪ್ರದೇಶ ಆಡಳಿತ ಕಾಯಿದೆ- 2009**


**ಅಧ್ಯಾಯ : 1- ಪೀಠಿಕೆ**

ಪರಿಚ್ಛೇದ 1- ಸಂಕ್ಷಿಪ್ತ ಶೀರ್ಷಿಕೆ, ವಿಸ್ತೃತ ಮತ್ತು ಉಪಕ್ರಮ

ಪರಿಚ್ಛೇದ 2- ವಿವರಣೆ

**ಅಧ್ಯಾಯ-2- ಸ್ಥಾಪನೆ**

ಪರಿಚ್ಛೇದ- 3. ನಗರಪಾಲಿಕೆಯ ಸ್ಥಾಪನೆ, ಇತರ

ಪರಿಚ್ಛೇದ- 4. ವಿಸ್ತೃತ ನಗರ ಪ್ರದೇಶದ ವಿವರಣೆ ಮತ್ತು ಪ್ರದೇಶಾಭಿವೃದ್ಧಿ ಹಾಗೂ ವಿಸ್ತರಣೆ

ಪರಿಚ್ಛೇದ -5. ಗಡಿ ರೇಖೆಯ ನಿರ್ವಹಣೆ

**ಅಧ್ಯಾ0ು -3 - ನಗರಪಾಲಿಕೆ ಅಧಿಕಾರಿಗಳು ಮತ್ತು ಚುನಾವಣೆಗಳು**

ಪರಿಚ್ಛೇದ - 6- ನಗರಪಾಲಿಕೆ ಅಧಿಕಾರಿಗಳು

ಪರಿಚ್ಛೇದ - 7- ನಗರಪಾಲಿಕೆ0ು ಸಂವಿಧಾನ

ಪರಿಚ್ಛೇದ - 8- ಮೇ0ುರ್ ಚುನಾವಣೆ

ಪರಿಚ್ಛೇದ -9- ನಗರಪಾಲಿಕೆ ಸದಸ್ಯರ ಆಯ್ಕೆ

ಪರಿಚ್ಛೇದ -10- ಸ್ಥಾಯಿ ಸಮಿತಿಗಳು

ಪರಿಚ್ಛೇದ -11- ಸ್ಥಾಯಿ ಸಮಿತಿ ಅಧ್ಯಕ್ಷರು

ಪರಿಚ್ಛೇದ -12- ಸ್ಥಾಯಿ ಸಮಿತಿ ಮತ್ತು ಅಧ್ಯಕ್ಷರ ಪರಾಮರ್ಶೆ

**ಅಧ್ಯಾ0ು- 4- ಪ್ರಾದೇಶಿಕ ಯೋಜನೆ**

ಪರಿಚ್ಛೇದ- 13. ಮಹಾ ನಗರ ಯೋಜನಾ ಸಮಿತಿ

ಪರಿಚ್ಛೇದ– 14. ನಾಮನಿರ್ದೇಶಿತ ಸದಸ್ಯರ ಅವಧಿ

ಪರಿಚ್ಛೇದ– 15. ಪ್ರಧಾನ ಕಾರ್ಯಕಾರಿ ಸಮಿತಿ ಮತ್ತು ವಿಷಯ ಸಮಿತಿಗಳು

ಪರಿಚ್ಛೇದ– 16– ಎಂ.ಪಿ.ಸಿಯ ಅಧಿಕಾರ ವ್ಯಾಪ್ತಿ

ಪರಿಚ್ಛೇದ – 17– ಯೋಜನೆ ಮತ್ತು ನಿಯಂತ್ರಕ ವಿಭಾಗದ ಅಧಿಕಾರ

ಪರಿಚ್ಛೇದ – 18– ಪ್ರಧಾನ ಯೋಜನೆ

ಪರಿಚ್ಛೇದ –19– ವಾರ್ಡ್‌ಗಳ ನಿಷ್ಕರ್ಷೆ

ಪರಿಚ್ಛೇದ–20– ವಾರ್ಡ್‌ಗಳ ಸಮಿತಿ

ಪರಿಚ್ಛೇದ– 21– ನೆರೆಹೊರೆಯ ಪ್ರದೇಶ ಮತ್ತು ನೆರೆಹೊರೆಯ ಪ್ರದೇಶ ಸಮಿತಿ

ಪರಿಚ್ಛೇದ –22– ನೆರೆಹೊರೆಯ ಪ್ರದೇಶ ಸಮಿತಿಯ ಸಂಚಾಲಕ

ಪರಿಚ್ಛೇದ –23– ನೆರೆಹೊರೆಯ ಪ್ರದೇಶ ಮತ್ತು ನೆರೆಹೊರೆಯ ಪ್ರದೇಶ ಸಮಿತಿ ಮತ್ತು ನೆರೆಹೊರೆಯ ಪ್ರದೇಶ ಸಮಿತಿಯ ಸಂಚಾಲಕರ ಚುನಾವಣೆ

ಪರಿಚ್ಛೇದ –24– ಆಯುಕ್ತರು ಮತ್ತು ಅವರ ಅಧಿಕಾರಾವಧಿ, ಇತರ

ಪರಿಚ್ಛೇದ – 25– ಆಯುಕ್ತರ ಸೇವೆ ಮತ್ತು ನಿಯಮಾವಳಿಗಳು

ಪರಿಚ್ಛೇದ– 26– ಹಂಗಾಮಿ ಆಯುಕ್ತರು

ಪರಿಚ್ಛೇದ– 27– ಗೌರವ ಸಂಭಾವನೆ , ಶುಲ್ಕ ಅಥವಾ ಭತ್ಯೆ

ಪರಿಚ್ಛೇದ– 28– ಮೇಯರ್, ನಗರಪಾಲಿಕೆ ಸದಸ್ಯ ಮತ್ತು ಸಂಚಾಲಕರ ಪ್ರಮಾಣ ವಚನ

ಪರಿಚ್ಛೇದ 29– ಆಸ್ತಿ ವಿವರ ಘೋಷಣೆ

ಪರಿಚ್ಛೇದ –30– ಮತದಾನದ ಹಕ್ಕು

ಪರಿಚ್ಛೇದ –31– ಮತದಾರರ ಚೀಟಿ

ಪರಿಚ್ಛೇದ 32– ರಾಜ್ಯ ಚುನಾವಣೆ ಆಯೋಗದಿಂದ ಚುನಾವಣೆ ದಿನಾಂಕ ನಿಗದಿ

ಪರಿಚ್ಛೇದ –33– ಅಭ್ಯರ್ಥಿಗಳ ಅರ್ಹತೆ

ಪರಿಚ್ಛೇದ–34– ಮೇಯರ್, ನಗರಪಾಲಿಕೆ ಸದಸ್ಯ ಅಥವಾ ಸಂಚಾಲಕರ ಅನರ್ಹತೆ

ಪರಿಚ್ಛೇದ –35– ಚುನಾವಣೆಯ ಸಾಮಾನ್ಯ ನಿಯಮಾವಳಿಗಳು

**ಅಧ್ಯಾಯ 5– ನಗರಪಾಲಿಕೆ ಅಧಿಕಾರಿಗಳ ಅಧಿಕಾರ ಮತ್ತು ಕಾರ್ಯವಿಧಾನ**

ಪರಿಚ್ಛೇದ –36– ನಗರಪಾಲಿಕೆಯ ಸಾಮಾನ್ಯ ಅಧಿಕಾರಗಳು

ಪರಿಚ್ಛೇದ –37– ಮೇಯರ್ ಅಧಿಕಾರ ವ್ಯಾಪ್ತಿ ಮತ್ತು ಕಾರ್ಯವಿಧಾನ

ಪರಿಚ್ಛೇದ –37–ಎ– ಮೇಯರ್ ಸಮಿತಿ

ಪರಿಚ್ಛೇದ 38– ನಗರಪಾಲಿಕೆಯ ಕಡ್ಡಾಯ ಕಾರ್ಯಕ್ರಮಗಳು

ಪರಿಚ್ಛೇದ –39– ನಗರಪಾಲಿಕೆಯ ವಿವೇಚನಾ ಕ್ರಮಗಳು

ಪರಿಚ್ಛೇದ – 40– ನಗರಪಾಲಿಕೆಯ ಆಸ್ತಿ

ಪರಿಚ್ಛೇದ –41– ಸ್ಥಾಯಿ ಸಮಿತಿಯ ಕಾರ್ಯವಿಧಾನ

ಪರಿಚ್ಛೇದ –42– ವಾರ್ಡ್ ಸಮಿತಿಯ ಕಾರ್ಯ ವಿಧಾನ

ಪರಿಚ್ಛೇದ –43– ವಾರ್ಡ್ ಸಮಿತಿಯ ಹಕ್ಕುಗಳು

ಪರಿಚ್ಛೇದ –44– ನೆರೆಹೊರೆಯ ಪ್ರದೇಶ ಸಮಿತಿಯ ಕಾರ್ಯವಿಧಾನ ಮತ್ತು ಕರ್ತವ್ಯಗಳು

ಪರಿಚ್ಛೇದ –45– ನೆರೆಹೊರೆಯ ಪ್ರದೇಶ ಸಮಿತಿಯ ಹಕ್ಕುಗಳು

ಪರಿಚ್ಛೇದ –46– ಸ್ಥಾಯಿ ಸಮಿತಿಯಿಂದ ಆಯುಕ್ತರಿಗೆ ಅಧಿಕಾರ ನಿಯೋಗ

ಪರಿಚ್ಛೇದ – 47– ಆಯುಕ್ತರ ಕಾರ್ಯವಿಧನ

ಪರಿಚ್ಛೇದ –48– ನಗರಪಾಲಿಕೆ ಮೇಲಿನ ನಿಯಂತ್ರಣ

ಪರಿಚ್ಛೇದ–49– ನಗರಪಾಲಿಕೆ ಸದಸ್ಯರ ಅಧಿಕಾರ

**ಅಧ್ಯಾಯ– 6– ಕಲಾಪ**

ಪರಿಚ್ಛೇದ– 50– ನಗರಪಾಲಿಕೆಯ ಕಲಾಪ ಮತ್ತು ಸ್ಥಾಯಿ ಸಮಿತಿಗಳು

ಪರಿಚ್ಛೇದ –51– ನಗರಪಾಲಿಕೆಯ ನಿರ್ಣಯಗಳನ್ನು ಮಂಡಿಸುವ ಅಧಿಕಾರಿಗಳ ಬಾಧ್ಯತೆ

ಪರಿಚ್ಛೇದ – 52– ಕಲಾಪ, ಸ್ಥಾಯಿ ಸಮಿತಿಯಿಂದ ನಗರಪಾಲಿಕೆ ಪ್ರಸ್ತಾಪಗಳನ್ನು ಉದ್ಧರಿಸಬಹುದು, ಇತರ

ಪರಿಚ್ಛೇದ –53– ದಾಖಲೆ ಹಾಗೂ ವಿವರಣೆಗಳನ್ನು ಆಯುಕ್ತರು ಒದಗಿಸುವರು, ಇತ್ಯಾದಿ

ಪರಿಚ್ಛೇದ –54– ಇತರ ಸ್ಥಳೀಯಾಧಿಕಾರಿಗಳ ಜತೆ ಜಂಟಿ ನಿರ್ವಹಣೆ

ಪರಿಚ್ಛೇದ – 55– ನಗರಪಾಲಿಕೆಯ ಕಲಾಪ, ಇತರ, ಅನರ್ಹತೆಯ ವಿಚಾರ, ಇತ್ಯಾದಿ

ಪರಿಚ್ಛೇದ –56– ಚರ್ಚೆಯಲ್ಲಿ ಭಾಗವಹಿಸುವ ಆಯುಕ್ತರ ಅಧಿಕಾರ, ಆದರೆ ನಿರ್ಣಯ ಅಥವಾ ಮತ ಚಲಾಯಿಸುವಂತಿಲ್ಲ

ಪರಿಚ್ಛೇದ –57– ನಗರಪಾಲಿಕೆ ಸದಸ್ಯರು ಹಾಗೂ ಸಂಚಾಲಕರು ಚರ್ಚೆಯಿಂದ ದೂರ ಉಳಿಯುವುದು ಮತ್ತು ಮತ ಚಲಾಯಿಸದಿರುವುದು

ಪರಿಚ್ಛೇದ –58– ಆಡಳಿತಾತ್ಮಕ ವರದಿಯನ್ನು ಸರಕಾರಕ್ಕೆ ಸಲ್ಲಿಸುವುದು

ಪರಿಚ್ಛೇದ –59– ನೇಮಕಾತಿ ಹಾಗೂ ಸೇವೆಯ ಷರತ್ತುಗಳು

ಪರಿಚ್ಛೇದ – 60– ಸರಕಾರದ ಅಧಿಕಾರ ಮತ್ತು ತೆರಿಗೆಯ ದಾಖಲೆಗಳು

ಪರಿಚ್ಛೇದ –61– ಹಣಕಾಸು

**ಅಧ್ಯಾಯ–7– ಆಸ್ತಿ, ಭೂ ಅಭಿವದ್ಧಿ ಬ್ಯಾಂಕ್ ಮತ್ತು ಗುತ್ತಿಗೆ**

ಪರಿಚ್ಛೇದ – 62– ಭೂ ಅಭಿವದ್ಧಿ ಬ್ಯಾಂಕ್

ಪರಿಚ್ಛೇದ –63– ಭೂ ಸ್ವಾಧೀನ

ಪರಿಚ್ಛೇದ –64– ಆಸ್ತಿ ಹಿತಾಸಕ್ತಿ ಇತ್ಯರ್ಥ

ಪರಿಚ್ಛೇದ –65– ಭೂ ಸ್ವಾಧೀನ ಕಾಯಿದೆ–1894ರ ಅಡಿಯಲ್ಲಿ ಸ್ಥಿರಾಸ್ತಿಯ ಸ್ವಾಧೀನ ಪ್ರಕ್ರಿಯೆ

ಪರಿಚ್ಛೇದ ವಿಭಾಗ–66–ಭೂಮಿ ಮತ್ತು ಇತರ ಆಸ್ತಿಯ ನಿಬಂಧನೆ

ಪರಿಚ್ಛೇದ – 67– ನಗರಪಾಲಿಕೆಯಿಂದ ಅಥವಾ ವಿರುದ್ಧವಾಗಿ ಆಸ್ತಿಯ ಹಕ್ಕು ನಿರ್ಧಾರ

ಪರಿಚ್ಛೇದ –68– ಆಡಳಿತದ ವರ್ಗಾವಣೆ ಮತ್ತು ಅಧಿಕಾರದ ಪ್ರಾಸಂಗಿಕತೆ

ಪರಿಚ್ಛೇದ –69– ಗುತ್ತಿಗೆಯ ಸಾಮಾನ್ಯ ನಿಬಂಧನೆಗಳು

**ಅಧ್ಯಾಯ 8–ನೀರು ಸರಬರಾಜು ಮತ್ತು ಒಳ ಚರಂಡಿ**

**ಅಧ್ಯಾಯ–9– ಬೀದಿಗಳು**

ಪರಿಚ್ಛೇದ–71– ಕರ್ನಾಟಕ ನಗರಪಾಲಿಕೆ ಕಾಯಿದೆಯಲ್ಲಿನ ನಿಬಂಧನೆಗಳು

**ಅಧ್ಯಾಯ–10 ದಂಡನೆ**

**ಅಧ್ಯಾಯ–11– ಅನುಬಂಧ**

ಪರಿಚ್ಛೇದ–72–ಕರ್ನಾಟಕ ನಗರಪಾಲಿಕೆಗಳ ಕಾಯಿದೆಯ 1976ರ ಪ್ರತಿಬಂಧಕಗಳು

ಪರಿಚ್ಛೇದ –73– ರದ್ಧತಿ ಮತ್ತು ಉಳಿತಾಯ

# ಬೆಂಗಳೂರು ಪ್ರದೇಶ ಆಡಳಿತ ವಿಧೇಯಕ, 2009

**ಉದ್ದೇಶ ಹಾಗೂ ಕಾರಣಗಳು**

ಬೆಂಗಳೂರು ನಗರ ಮತ್ತು ಬಹತ್ ಬೆಂಗಳೂರಿನ ವ್ಯಾಪ್ತಿ ಅನೂಹ್ಯವಾಗಿ ವಿಸ್ತರಣೆಯಾಗಿದೆ. ಆದ್ದರಿಂದ ನಗರದಲ್ಲಿ ವಾಸಿಸುತ್ತಿರುವ ನಾಗರಿಕರ ಹಿತಾಸಕ್ತಿಗೆ ಮೊದಲ ಆದ್ಯತೆ ನೀಡುವ ಆಡಳಿತದ ಮಾದರಿಯನ್ನು ಒದಗಿಸಬೇಕಾದ ಅಗತ್ಯ ತಲೆದೋರಿದೆ. ಈ ಮಾದರಿಯು ಜವಾಬ್ದಾರಿಯುತ, ಪಾರದರ್ಶಕ, ಉತ್ತರದಾಯಿತ್ವ ಹಾಗೂ ನಾಗರಿಕ ಕೇಂದ್ರಿತ ಸ್ವರೂಪದಲ್ಲಿ ಇರಬೇಕಾದ ಅನಿವಾರ್ಯತೆಯನ್ನು ಒಳಗೊಂಡಿದೆ.

**ವಿಧೇಯಕದ ಪ್ರಮುಖ ಲಕ್ಷಣಗಳು ಇಂತಿವೆ :**

1. ಬೆಂಗಳೂರು ನಗರ ಮತ್ತು ಬೆಂಗಳೂರು ಮಹಾ ನಗರಪಾಲಿಕೆ ವ್ಯಾಪ್ತಿಯಲ್ಲಿರುವ ನಾಗರಿಕರಿಗೆ ಸಮಗ್ರ ಸ್ವರೂಪದ ಆಡಳಿತ ಮಾದರಿಯನ್ನು ಒದಗಿಸುವುದು

2. ನಗರವಾಸಿಗಳಿಗೆ ನೇರವಾಗಿ ಉತ್ತರದಾಯಿತ್ವವಾಗಿರುವ ಆಡಳಿತದ ಮಾದರಿಯನ್ನು ಸಷ್ಟಿಸುವುದು

3. ಜವಾಬ್ದಾರಿಯುತ ಹಾಗೂ ಪಾರದರ್ಶಕ ಆಡಳಿತ ಒದಗಿಸುವುದು

4. ಬೆಂಗಳೂರು ನಗರ ಮತ್ತು ಬಹತ್ ಬೆಂಗಳೂರು ಮಹಾ ನಗರಪಾಲಿಕೆ ವಲ೦ುದಲ್ಲಿ ಸ್ಥಳೀ೦ು ಯೋಜನಾ ಆಡಳಿತ ವ್ಯವಸ್ಥೆ ಸಷ್ಟಿ

5. ಬೆಂಗಳುರು ಮತ್ತು ಬೆಂಗಳೂರು ಮಹಾ ನಗರಪಾಲಿಕೆ ವಲಯದಲ್ಲಿ ಸಮಗ್ರ ಅಭಿವದ್ಧಿ ಸಂಯೋಜಿತ ಅಭಿವದ್ಧಿಗೆ ಪೂರಕ ಆಡಳಿತ ವ್ಯವಸ್ಥೆ ರಚನೆ

6. ಬೆಂಗಳೂರು ನಗರ ಮತ್ತು ಬಹತ್ ಬೆಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಭೂ ಅಭಿವದ್ಧಿ ಬ್ಯಾಂಕ್ ರಚನೆಗೆ ತಾಂತ್ರಿಕ ೦ುತ್ನ

7. ಬೆಂಗಳೂರು ನಗರ ಮತ್ತು ಬೆಂಗಳೂರು ಬಹತ್ ನಗರಪಾಲಿಕೆ ವಲಯದಲ್ಲಿ ಕೇಂದ್ರ ಅಂಕಿ ಅಂಶಗಳ ವ್ಯವಸ್ಥೆ ರಚನೆ

ಪ್ರಸ್ತಾವನೆ – ಬೆಂಗಳೂರು ಪ್ರದೇಶ ಆಡಳಿತ ಕಾಯಿದೆ, 2009

ಬೆಂಗಳೂರು ನಗರ ಮತ್ತು ಬಹತ್ ಬೆಂಗಳೂರು ಪ್ರದೇಶದ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಕಾನೂನುಗಳಲ್ಲಿ ತಿದ್ದುಪಡಿ ಹಾಗೂ ಸಂಯೋಜನೆಗೊಳಿಸುವ ಕಾಯಿದೆ

ಇಲ್ಲಿ ಬೆಂಗಳೂರು ನಗರಪಾಲಿಕೆ ಮತ್ತು ಬಹತ್ ಬೆಂಗಳೂರು ಪ್ರದೇಶಕ್ಕೆ ಸಂಬಂಧಿಸಿದ ಕಾನೂನುಗಳನ್ನು ಸಮಯೋಚಿತವಾಗಿ ಸಂಯೋಜಿಸಲಾಗಿದೆ. ಸೂಕ್ತ ತಿದ್ದುಪಡಿ ತರಲಾಗಿದೆ.

**ಅಧ್ಯಾ೦ು : 1– ಪ್ರಾಸ್ತಾವಿಕ**

**ಪರಿಚ್ಛೇದ– 1– ಸಂಕ್ಷಿಪ್ತ ಶೀರ್ಷಿಕೆ, ವಿಸ್ತ*ತ ಮತ್ತು ಉಪಕ್ರಮ**

1. ಈ ಕಾಯಿದೆಯನ್ನು ಬೆಂಗಳೂರು ಪ್ರದೇಶ ಆಡಳಿತ ಕಾಯಿದೆ, 2009 ಎಂದು ಕರೆಯಬಹುದು

2. ಇದು ಇಡೀ ಕರ್ನಾಟಕಕ್ಕೆ ಅನ್ವ೦ುವಾಗುತ್ತದೆ.

3. ಈ ಕಾಯಿದೆಯನ್ನು ವಿವಿಧ ದಿನಾಂಕಗಳಂದು ಬೆಂಗಳೂರು ನಗರ ಮತ್ತು ಬಹತ್ ಬೆಂಗಳೂರು ವ್ಯಾಪ್ತಿಗೆ ವಿಸ್ತರಿಸಬಹುದು.

4. ಈ ಕಾಯಿದೆಯನ್ನು ಬೆಂಗಳೂರು ಮಹಾನಗರಪಾಲಿಕೆ ವಲಯ (ಬಿಎಂಆರ್) ವ್ಯಾಪ್ತಿಗೆ ಒಮ್ಮೆಲೇ ಅನ್ವ೦ುವಾಗುವಂತೆ ಅಧಿಸೂಚನೆಯ ಮೂಲಕ ಜಾರಿಗೊಳಿಸಬಹುದು. ಸರಕಾರ ನಂತರ ಅಧಿಸೂಚನೆಯ ಮೂಲಕ ಕಾಯಿದೆಯ ಕೆಲವು ಕಲಮುಗಳನ್ನು ಬಹತ್ ಬೆಂಗಳೂರು ಮಹಾನಗರಪಾಲಿಕೆಗೆ ಮಾತ್ರ ಅನ್ವ೦ುವಾಗುವಂತೆ ನಿರ್ಬಂಧಿಸಲೂ ಅವಕಾಶವಿದೆ.

**ಪರಿಚ್ಛೇದ–2– ವಿವರಣೆ**

**ಕಾಯಿದೆ೦ುಲ್ಲಿನ ಪ್ರಾಸಂಗಿಕವಾಗಿ ಒಳಗೊಂಡಿರುವ ಇತರ ಅಂಶಗಳು :**

**1. ಕಟ್ಟಡ ಅಂದರೆ –**

ಎ. ಮನೆ, ಉಪಗಹ, ಗುಡಿಸಲು, ಶೆಡ್ಡು, ತಂಗುದಾಣ, ಗೋಡೆ, ವರಾಂಡ, ಸ್ಥಿರವಾದ ವೇದಿಕೆ, ಹಾಗೂ ಕಟ್ಟಿಗೆ, ಮರ, ಮಣ್ಣು, ಲೋಹ, ಅಥವಾ ಕಲ್ಲಿನ ಸಾಮಗ್ರಿಗಳನ್ನು ಬಳಸಿದ ಕಟ್ಟಡದ ಇತರ ರಚನೆಗಳು

ಬಿ. ಚಕ್ರಗಳ ಮೇಲೆ ನಿಂತಿರುವ, ತಳಹದಿಯಿಲ್ಲದ ರಚನೆಗಳು,

ಸಿ. ಹಡಗು, ದೋಣಿ, ಟೆಂಟ್ ಮತ್ತು ಇತರ ದಾಸ್ತಾನು ಉದ್ದೇಶದ ಯಾವುದೇ ವಿಷಯ, ವಸ್ತು ರಚನೆಗಳು.

2. ಬೆ ಲಾ ಎಂದರೆ ನಗರಪಾಲಿಕೆ ಕಾಯಿದೆಯ ಅಡಿಯಲ್ಲಿ ರಚನೆಯಾಗಿರುವ ಉಪ ನಿಯಮಗಳು

3. ಅನಿಯತ ತೆರವು ಎಂದರೆ ನಗರಪಾಲಿಕೆ ಸದಸ್ಯನ ಅಧಿಕಾರಾವಧಿ ನಂತರ ತೆರವಾಗುವ ಸ್ಥಾನ ಹಾಗೂ ಅನಿಯತ ಚುನಾವಣೆ ಎಂದರೆ ಅನಿಯತವಾಗಿ ತೆರವಾಗಿರುವ ಸ್ಥಾನವನ್ನು ಭರ್ತಿ ಮಡಲು ನಡೆಸುವ ಚುನಾವಣೆ

4. ನಗರ ಎಂದರೆ ಬೆಂಗಳೂರಿನಲ್ಲಿ ನಗರ ಪ್ರದೇಶ ಎಂದು ಗುರುತಿಸಿರುವ ವಿಶಾಲವಾದ ಪ್ರದೇಶವಾಗಿದ್ದು, 4ನೇ ಪರಿಚ್ಛೇದದ ಪ್ರಕಾರ ಕಾಯಿದೆಯ ಅಡಿಯಲ್ಲಿ ಯಾವುದೇ ವಿಸ್ತರಣೆ, ನಿರ್ಮಾಣ ಅಥವಾ ಪರಿಷ್ಕರಣೆಗೆ ಅವಕಾಶವಿದೆ.

5. ಆಯುಕ್ತರು ಎಂದರೆ ಕಾಯಿದೆಯ ಅಡಿಯಲ್ಲಿ ನೇಮಕವಾಗಿರುವ ಆಯುಕ್ತರು

6. ಸಂಚಾಲಕರು ಎಂದರೆ ನೆರೆಹೊರೆಯ ಪ್ರದೇಶ ಸಮಿತಿಯ ಸಂಚಾಲಕರು

7. ನಗರಪಾಲಿಕೆ ಎಂದರೆ ಬೆಂಗಳೂರು ನಗರ ಮತ್ತು ಬಹತ್ ಬೆಂಗಳೂರು ಪ್ರದೇಶಕ್ಕೆ ಕಾಯಿದೆಯ ಅನ್ವಯ ನಗರಪಾಲಿಕೆ

8. ಮಂಡಳಿ ಎಂದರೆ ನಗರಪಾಲಿಕೆಯಲ್ಲಿ ನಗರಪಾಲಿಕೆ ಸದಸ್ಯರ ಮಂಡಳಿ

9. ಅಪಾಯಕಾರಿ ರೋಗಗಳು ಎಂದರೆ–

ಆ್ಯಂಥ್ರಾಕ್ಸ್, ಸಿಡುಬು, ಕಾಲರಾ, ಕುಷ್ಠ ರೋಗ, ಕ್ಷಯ, ರೇಬೀಸ್, ಪ್ಲೇಗ್ ಹಾಗೂ ಕಾಯಿದೆಯ ಅಡಿಯಲ್ಲಿ ಪ್ರಸ್ತಾಪಿಸಿದ ಯಾವುದೇ ರೋಗ.

10. ಒಳ ಚರಂಡಿ ಎಂದರೆ ಮನೆಯ ಚರಂಡಿ, ಕಶ್ಮಲ ನೀರು ಸಾಗಿಸುವ ಚರಂಡಿ, ಸುರಂಗಮಾರ್ಗ, ಕೊಳವೆ, ಕಾಲುವೆ, ಜಲ ಸಂಸ್ಕರಣಾ ಟ್ಯಾಂಕ್ ಇತ್ಯಾದಿ. ಮಾಲಿನ್ಯಯುಕ್ತ ನೀರನ್ನು ಸಂಸ್ಕರಿಸುವ ಕೇಂದ್ರಗಳ ಕಾಲುವೆ, ಕೊಳವೆ, ಮಳೆ ನೀರು ಸಂಗ್ರಹಾಗಾರದ ಕೊಳವೆ, ಕಾಲುವೆಗಳೂ ಇದೇ ವ್ಯಾಪ್ತಿಗೆ ಬರುತ್ತದೆ.

11. ಅಗತ್ಯ ಸೇವೆಗಳು ಎಂದರೆ ಕಾಯಿದೆಯ ಅಡಿಯಲ್ಲಿ ಉಲ್ಲೇಖಿಸಿರುವ ನಗರಪಾಲಿಕೆ ಅಧಿಕಾರಿ, ಸೇವಕ ಅಥವಾ ನಗರಪಾಲಿಕೆ ಸಿಬ್ಬಂದಿಗಳ ಸೇವೆ

12. ಕಾರ್ಖಾನೆ ಎಂದರೆ ಕಾರ್ಖಾನೆಗಳ ಕಾಯಿದೆ–1948ರ ಅಡಿಯಲ್ಲಿರುವ ಕಾರ್ಖಾನೆ

13. ಮಾಲಿನ್ಯವು ಚರಂಡಿ, ತಿಪ್ಪೆ, ಕಸ, ಕೊಚ್ಚೆ, ಕೊಳೆಯುವಿಕೆಯನ್ನು ಒಳಗೊಂಡಿದೆ.

14. ಸರಕಾರ ಎಮದರೆ ರಾಜ್ಯ ಸರಕಾರ

15. ಗುಡಿಸಲು ಎಂದರೆ ಮರ, ಕೆಸರು, ಎಲೆಗಳು ಅಥವಾ ಜೊಂಡು ಹುಲ್ಲು ಬಳಸಿ ನಿರ್ಮಿಸಿದ ತಾತ್ಕಾಲಿಕ ರಚನೆ.

16. ಭೂಮಿ ಎಂದರೆ ನೀರನ್ನು ಒಳಗೊಂಡಿರುವ ನೆಲ, ಶಾಶ್ವತವಾಗಿ ಯಾವುದನ್ನಾದರೂ ಹೊಂದಿಕೊಂಡಿರುವ ಜಾಗ

17. ಬಡಾವಣೆ ಎಂದರೆ ವೆಯಕ್ತಿಕ ಅಥವಾ ವ್ಯಕ್ತಿಗಳ ಮಂಡಳಿ ಮೂಲಕ ನಿರ್ಮಿಸಿದ ಬಡಾವಣೆ

18. ಪರವಾನಗಿ ಹೊಂದಿರುವ ಕೊಳಾಯಿ ರಿಪೇರಿ ಮಾಡುವವ, ಪರವಾನಗಿ ಹೊಂದಿರುವ ಸಮೀಕ್ಷಕ, ಪರವಾನಗಿ ಹೊಂದಿರುವ ಎಂಜಿನಿಯರ್, ಪರವಾನಗಿ ಹೊಂದಿರುವ ಆರ್ಕಿಟೆಕ್ಟ್, ಪರವಾನಗಿ ಹೊಂದಿರುವ ಎಂಜಿನಿಯರ್ ಎಂದರೆ ಈ ಕಾಯಿದೆಯ ಅಡಿಯಲ್ಲಿ ಅನ್ವಯವಾಗುವವರು.

19. ಸ್ಥಳೀಯಾಡಳಿತ ಎಂದರೆ ಕಾಯಿದೆಯ ವ್ಯಾಪ್ತಿಗೆ ಬರುವ ನಗರಪಾಲಿಕೆ, ನಗರಪಾಲಿಕೆ ಮಂಡಳಿ, ನಗರಸಭೆ, ಪಟ್ಟಣ ಪಂಚಾಯತ್, ನಗರಾಭಿವದ್ಧಿ ಪ್ರಾಧಿಕಾರ, ನಗರಾಭಿವದ್ಧಿ ಮಂಡಳಿ, ಪಟ್ಟಣ ಅಭಿವದ್ಧಿ ಮಂಡಳಿ, ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ, ಗ್ರಾಮ ಪಂಚಾಯಿತಿ

20. ಮಾರುಕಟ್ಟೆ ಎಂದರೆ ವ್ಯಾಪಾರದ ಉದ್ದೇಶಕ್ಕಾಗಿ ಇರುವಂತಹ ಸ್ಥಳ. ಆಹಾರೋತ್ಪನ್ನಗಳು, ಮೀನು, ಮಾಂಸ, ತರಕಾರಿ, ಹಣ್ಣು ಹಂಪಲು, ಹೂವು, ಸಾಂಬಾರ ಪದಾರ್ಥಗಳು ಮುಂತಾದ ವಸ್ತುಗಳನ್ನು ಮಾರಾಟ ಮಾಡುವ ಸ್ಥಳ.

21. ನಗರಪಾಲಿಕೆ ಪ್ರಾಧಿಕಾರ ಎಂದರೆ ಕಾಯಿದೆಯ ಅಡಿಯಲ್ಲಿ ಸ್ಥಾಪಿತವಾಗಿರುವ ಪ್ರಾಧಿಕಾರ

22. ನಗರಪಾಲಿಕೆ ಜಲ ಕಾರ್ಯ ಎಂದರೆ ನಗರಪಾಲಿಕೆಯ ವತಿಯಿಂದ ನಡೆಯುವ ಜಲ ಸಂಬಂಧಿತ ಚಟುವಟಿಕೆಗಳು

23. ಹಾನಿಯು ಸಾರ್ವಜನಿಕರ ಆರೋಗ್ಯ, ಆಸ್ತಿಪಾಸ್ತಿಗೆ ಯಾವುದೇ ಆಪತ್ತು, ಅಪಾಯ, ತೊಂದರೆಗೆ ಕಾರಣವಾಗುವ ಘಟನೆಗಳನ್ನು ಒಳಗೊಂಡಿದೆ.

24. ಅನುಭೋಗಿ ಎಂದರೆ ಯಾವುದೇ ವ್ಯಕ್ತಿ ಕಟ್ಟಡ ಅಥವಾ ಜಮೀನಿಗೆ ನಿಗದಿತ ಅವಧಿಯಲ್ಲಿ ಮಾಲೀಕನಿಗೆ ಬಾಡಿಗೆ ಕೊಟ್ಟು ಹೊಂದುವುದು.

25. ಕಾನೂನು ಬಾಹಿರ ಪ್ರಕರಣದಲ್ಲಿ ಪ್ರಾಣಿಗಳ ಕಳೇವರವನ್ನು ಕೊಳೆಯಲು ಬಿಡುವುದು ಸೇರುತ್ತದೆ.

26. ಮಾಲೀಕ ಎಂದರೆ ಆಸ್ತಿಯ ಲಾಭ ಅಥವಾ ಬಾಡಿಗೆಯನ್ನು ಏಜೆಂಟ್, ಟ್ರಸ್ಟಿ, ಪೋಷಕ, ವ್ಯವಸ್ಥಪಕನಾಗಿ ಮತ್ತೊಬ್ಬ ವ್ಯಕ್ತಿಯಿಂದ ಪಡೆಯುವವನಾಗಿದ್ದಾನೆ.

27. ಜನಸಂಖ್ಯೆ ಎಂದರೆ ಕೊನೆಯ ಜನಗಣತಿಯಲ್ಲಿ ದಾಖಲಾದ ಇತ್ತೀಚಿನ ಜನಸಂಖ್ಯೆ

28. ಸ್ಥಿರಾಸ್ತಿಯು ಯಾವುದೇ ಅವಧಿಯ ಕಟ್ಟಡ, ನೆಲ, ನಿವೇಶನವನ್ನು, ಅದು ಖಾಸಗಿಯಾಗಲಿ, ಸಾರ್ವಜನಿಕವೇ ಆಗಿರಲಿ, ಒಳಗೊಳ್ಳುತ್ತದೆ.

29. ಅನುಶಾಸನ ಮಾಡಿದ ಅಂದರೆ ಈ ಕಾಯಿದೆ ಅಥವಾ ನಿಯಮಾವಳಿಯ ಮೂಲಕ ನಿಗದಿಪಡಿಸಿದ್ದು ಎಂದರ್ಥ.

30. ಖಾಸಗಿ ರಸ್ತೆ ಎಂದರೆ ಸಾರ್ವಜನಿಕ ರಸ್ತೆಯಲ್ಲದ ಯಾವುದೇ ರಸ್ತೆ, ಬೀದಿ, ಚೌಕ, ವೃತ್ತ, ಕಿರು ಹಾದಿ, ಓಣಿಯಾಗುತ್ತದೆ.

31. ಸಾರ್ವಜನಿಕ ರಸ್ತೆ ಎಂದರೆ ಸಾರ್ವಜನಿಕರು ಬಳಸುವ ಯಾವುದೇ ರಸ್ತೆ, ಬೀದಿ, ಚೌಕ, ವೃತ್ತ, ಕಿರುಹಾದಿ, ಓಣಿಯಾಗುತ್ತದೆ.

(ಎ) ಸಾರ್ವಜನಿಕ ಸೇತುವೆಯ ಮೇಲಿನ ರಸ್ತೆ

(ಬಿ) ಯಾವುದೇ ರಸ್ತೆಗೆ ಹೊಂದಿಕೊಂಡಿರುವ ಕಾಲುದಾರಿ

(ಸಿ) ಯಾವುದೇ ಬೀದಿಗೆ ಹೊಂದಿಕೊಂಡಿರುವ ಚರಂಡಿ, ಗಡಿಗಳು ಸರಕಾರ ಅಥವಾ ನಗರಪಾಲಿಕೆ ವ್ಯಾಪ್ತಿಗೆ ಸೇರುತ್ತದೆ.

32. ಯುಕ್ತ ದರದ ಮೌಲ್ಯ ಎಂದರೆ ಕಾಯಿದೆಯನುಸಾರ ನಿಗದಿಯಾಗಿರುವ ಆಸ್ತಿ ತೆರಿಗೆಯ ಅಂದಾಜು.

33. ನಿಯಂತ್ರಣ ಎಂದರೆ ಕಾಯಿದೆಯನುಸಾರ ಜಾರಿಗೊಳಿಸಿದ ನಿಯಂತ್ರಣ ಕ್ರಮಗಳು

34. ಕಶ್ಮಲ ಎಂದರೆ ಧೂಳು, ಬೂದಿ, ಮುರಿದ ಇಟ್ಟಿಗೆ, ಗಾರೆ, ಪುಡಿಯಾದ ಗಾಜು ಮುಂತಾದವು ಸೇರುತ್ತವೆ.

35. ಪರಿಶಿಷ್ಟ ಎಂದರೆ ಕಾಯಿದೆಯಲ್ಲಿ ಸೇರಿಸಿರುವ ಪರಿಶಿಷ್ಟ

36. ಪರಿಶಿಷ್ಟ ಜಾತಿ ಎಂದರೆ ಭಾರತದ ಸಂವಿಧಾನದಲ್ಲಿ ಹೇಳಿರುವಂತೆ ಪರಿಶಿಷ್ಟ ಜಾತಿ.

37. ಪರಿಶಿಷ್ಟ ವರ್ಗ ಎಂದರೆ ಸಂವಿಧಾನದಲ್ಲಿ ಹೇಳಿರುವ ಪ್ರಕಾರ ಪರಿಶಿಷ್ಟ ಜಾತಿ

38. ಚರಂಡಿ ಎಂದರೆ ಶೌಚಾಲಯದ ತ್ಯಾಜ್ಯ, ಮೂತ್ರ, ರೊಚ್ಚೆಗುಂಡಿ, ಕೊಚ್ಚೆ ನೀರು, ಉತ್ಪಾದನಾ ಘಟಕಗಳಿಮದ ಹೊರಬಿಡುವ ಕಶ್ಮಲಯುಕ್ತ ನೀರು ಒಳಗೊಳ್ಳುತ್ತದೆ.

39. ಒಳಚರಂಡಿ ಎಂದರೆ ಮುಚ್ಚಿದ ಮಾರ್ಗದಲ್ಲಿ ಚರಂಡಿಯನ್ನು ನಿರ್ಮಿಸಿರುವುದು. ತ್ಯಾಜ್ಯ ನೀರನ್ನು ಇದರ ಮೂಲಕ ಸಾಗಿಸುವುದು.

40. ರಾಜ್ಯ ಚುನಾವಣಾ ಆಯೋಗ ಎಂದರೆ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 1993ರ 308ನೇ ಕಲಮಿನ ಪ್ರಕಾರ ರಚನೆಯಾದ ರಾಜ್ಯ ಚುನಾವಣಾ ಆಯೋಗ

41. ರಸ್ತೆಯ ಶ್ರೇಣಿ ಎಂದರೆ ರಸ್ತೆಗಳನ್ನು ವಿಭಜಿಸುವ ರೇಖೆ

42. ತೆರಿಗೆಯು ಟೋಲ್ ಸಂಗ್ರಹ, ಸೆಸ್, ಶುಲ್ಕ ಅಥವಾ ಕಾಯಿದೆಯ ಅಡಿಯಲ್ಲಿ ವಿಧಿಸಿರುವ ಇತರ ತೆರಿಗೆಯನ್ನು ಒಳಗೊಂಡಿದೆ.

43. ವ್ಯಾಪಾರ ತ್ಯಾಜ್ಯ ಎಂದರೆ ಯಾವುದೇ ವ್ಯಾಪಾರ ಇಲ್ಲವೇ ಉದ್ದಿಮೆಯಿಂದ ಹೊರ ಹೋಗುವ ದ್ರವರೂಪದ ತ್ಯಾಜ್ಯ

44. ವಾಣಿಜ್ಯ ಆಸ್ತಿಪಾಸ್ತಿ ಎಂದರೆ ವ್ಯಾಪಾರ ಅಥವಾ ಉದ್ದಿಮೆಗೆ ಬಳಸುವ ಜಾಗ

45. ವ್ಯಾಪಾರ ತಿರಸ್ಕೃತ ಎಂದರೆ ಯಾವುದೇ ವ್ಯಾಪಾರ, ಉದ್ದಿಮೆಯನ್ನು ತಿರಸ್ಕರಿಸುವುದು

46. ಪೂರ್ಣ ಪ್ರಮಾಣದ ಸಂಖ್ಯೆ ಎಂದರೆ ನಗರಪಾಲಿಕೆ ಸಭೆಗಳಲ್ಲಿ ಎಲ್ಲ ಸದಸ್ಯರೂ ಭಾಗವಹಿಸುವುದು

## ಅಧ್ಯಾಯ– 2– ಸ್ಥಾಪನೆ

ಪರಿಚ್ಛೇದ 3 : ನಗರಪಾಲಿಕೆಯ ಸ್ಥಾಪನೆ, ಇತರ :

1. ಬೆಂಗಳೂರಿನಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು ಸ್ಥಳೀಯಾಡಳಿತವನ್ನು ನಿರ್ವಹಿಸುತ್ತದೆ. ಹೀಗಿದ್ದರೂ ಬಿಆರ್‌ಜಿಎ ಎನ್ನುವುದು ಬೃಹತ್ ಬೆಂಗಳೂರು ವಲಯವದ ಆಡಳಿತವನ್ನು ನಿರ್ವಹಿಸಲಿದೆ. ಇದರಲ್ಲಿ ನಗರಪಾಲಿಕೆಯು ಅವಿಭಾಜ್ಯ ಅಂಗವಾಗಲಿದ್ದು, ತನ್ನ ಅಧಿಕಾರವನ್ನು ಕಾಯಿದೆಯ ಪ್ರಕಾರ ಚಲಾಯಿಸಲಿದೆ.

ಪರಿಚ್ಛೇದ 4 : ನಿರ್ದಿಷ್ಟ ವಿಸ್ತೃತ ನಗರ ಪ್ರದೇಶ ಮತ್ತು ನಗರ ಪ್ರದೇಶಗಳ ಸೇರ್ಪಡೆ

1. ರಾಜ್ಯಪಾಲರು ಇವುಗಳನ್ನು ಪರಿಗಣಿಸಬಹುದು–

(ಎ) ಯಾವುದೇ ಪ್ರದೇಶದ ಜನಸಂಖ್ಯೆ

(ಬಿ) ಪ್ರದೇಶದ ಜನಸಂಖ್ಯೆಯ ಸಾಂದ್ರತೆ

(ಸಿ) ಸ್ಥಳೀಯಾಡಳಿತಕ್ಕೆ ಪ್ರದೇಶದಿಂದ ದೊರೆಯುವ ಆದಾಯ

(ಡಿ) ಪ್ರದೇಶದಲ್ಲಿನ ಕೃಷಿಯೇತರ ಚಟುವಟಿಕೆಗಳಿಂದ ಸೃಷ್ಟಿಯಾದ ಉದ್ಯೋಗ

(ಇ) ಪ್ರದೇಶದ ಆರ್ಥಿಕ ಪ್ರಾಮುಖ್ಯತೆ

(ಎಫ್ ) ಅಧಿಸೂಚನೆಯಲ್ಲಿ ಪ್ರಕಟಿಸಿದ ಇತರ ಅಂಶಗಳು. ನಗರ ಪ್ರದೇಶ ಎಂದು ಕರೆಸಿಕೊಳ್ಳಲು ಕೆಲವು ಲಕ್ಷಣಗಳಿರಬೇಕು–

(ಎ) ಪ್ರದೇಶದ ಜನಸಂಖ್ಯೆ 1 ಲಕ್ಷಕ್ಕೆ ಕಡಿಮೆ ಇಲ್ಲದಂತಿರಬೇಕು.

(ಬಿ) ಜನಸಂಖ್ಯೆಯ ಸಾಂದ್ರತೆ ಒಂದು ಚದರ ಕಿ.ಮೀಗೆ ಇ ಸಾವಿರಕ್ಕೆ ಕಡಿಮೆ ಇರದಂತಿರಬೇಕು.
(ಸಿ) ತಲಾ ಆದಾಯದ ವಾರ್ಷಿಕ ದರ ಹೆಚ್ಚಿರಬೇಕು
(ಡಿ) ಕೃಷಿಯೇತರ ಚಟುವಟಿಕೆಗಳ ಮೂಲಕ ಸೃಷ್ಟಿಯಾಗುವ ಉದ್ಯೋಗ ದರ ಒಟ್ಟಾರೆ ಉದ್ಯೋಗ ದರಕ್ಕಿಂತ ಕಡಿಮೆ ಇರಕೂಡದು.
(2) ಬೆಂಗಳೂರು ನಗರದ ವ್ಯಾಪ್ತಿಯಲ್ಲಿನ ವಿಸ್ತೃತ ನಗರ ಪ್ರದೇಶ ನಗರಪಾಲಿಕೆಯ ವ್ಯಾಪ್ತಿಗೆ ಸೇರುತ್ತದೆ.
(3) ರಾಜ್ಯಪಾಲರು ಅಧಿಸೂಚನೆಗೆ ಉಪ ಕಲಮಿನ ಅಧಿನಿಯಮ (ಎ)ಯಿಂದ 4ನೇ ಕಲಮಿನ ಅಧಿನಿಯಮ (ಎಫ್) ತನಕ ಪರಿಗಣಿಸಬಹುದು.
1. ನಗರದ ವಿಸ್ತೃತ ಪ್ರದೇಶವನ್ನು ಸ್ಥಳೀಯಾಡಳಿತ ವ್ಯಾಪ್ತಿಗೆ ಸೇರ್ಪಡೆಗೊಳಿಸಬಹುದು.
2. ನಗರದ ವಿಸ್ತೃತ ಪ್ರದೇಶದ ಮಿತಿಯನ್ನು ಸ್ಥಳೀಯಾಡಳಿತ ವ್ಯಾಪ್ತಿಗಿಂತ ಹೊರಗಿಡಬಹುದು.
(4) ಅಂತಹ ಯಾವುದೇ ಅಧಿಸೂಚನೆಯನ್ನು ಕರಡಿಲ್ಲದ ಹೊರತಾಗಿಯೂ, ಕೆಳಕಂಡ ವಿಧಾನದಲ್ಲಿ ಜಾರಿಗೊಳಿಸಬಹುದು–
1. ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿ ಎಲ್ಲರಿಗೂ ಲಭ್ಯವಾಗುವಂತೆ ನೋಡಿಕೊಳ್ಳಬಹುದು. ಆಕ್ಷೇಪಣೆ ಇದ್ದರೆ ಪ್ರಕಟಣೆ ಹೊರಬಿದ್ದ ಒಂದು ತಿಂಗಳೊಳಗೆ ಸಲ್ಲಿಸುವಂತೆ ತಿಳಿಸಬಹುದು.
2. ನಗರಪಾಲಿಕೆಗೆ ಈ ಸಂಬಂಧ ನಿರ್ದಿಷ್ಟ ವರ್ಗದ ಮೂಲಕ ಪ್ರಸ್ತಾಪಿಸಬಹುದು
(5) ಸ್ಥಳೀಯ ಪ್ರದೇಶ ವಿಸ್ತೃತ ನಗರ ಪ್ರದೇಶದ ವ್ಯಾಪ್ತಿಗೆ ಒಳಪಟ್ಟಾಗ–
(ಎ) ನಗರಪಾಲಿಕೆಯ ಬದ್ಧತೆ ಸರಕಾರದ ಜತೆ ಹೊಂದಿಕೊಳ್ಳುತ್ತದೆ.
(ಬಿ) ಸರಕಾರವು ನಗರಪಾಲಿಕೆಯನ್ನು ಸಂಪರ್ಕಿಸಿ ಆಸ್ತಿ, ಅನುದಾನ ಬಿಡುಗಡೆ, ಬದ್ಧತೆ ಮುಂತಾದ ವಿಚಾರಗಳ ಬಗ್ಗೆ ಸಮಾಲೋಚನೆ ನಡೆಸುತ್ತದೆ.
(6) ಸ್ಥಳೀಯ ಪ್ರದೇಶವು ವಿಸ್ತೃತ ನಗರ ಪ್ರದೇಶದ ವ್ಯಾಪ್ತಿಗೆ ಸೇರ್ಪಡೆಯಾದಾಗ ಕಾಯಿದೆಯ ಅಡಿಯಲ್ಲಿ ಬರುವ ಎಲ್ಲ ಅಧಿಸೂಚನೆ, ತೆರಿಗೆ ಪದ್ಧತಿ, ನಿಯಮಾವಳಿಗಳು, ಆದೇಶಗಳು, ಸೂಚನೆಯ ಪರಿಧಿಗೆ ಒಳಪಡುತ್ತದೆ.
ಪರಿಚ್ಛೇದ 5– ಗಡಿಗಳ ರಚನೆ ಮತ್ತು ನಿರ್ವಹಣೆ : ನಗರಪಾಲಿಕೆ ಆಯಾ ಕಂದಾಯ ಜಿಲ್ಲೆಯ ಉಪ ಆಯುಕ್ತರ ಅನುಮೋದನೆಯೊಂದಿಗೆ ತನ್ನ ಸ್ವಂತ ಖರ್ಚಿನಲ್ಲಿ ಗಡಿ ರೇಖೆಗಳನ್ನು ಅಳವಡಿಸುವ ಇಲ್ಲವೇ ಬದಲಿಸುವ ಕಾರ್ಯಗಳನ್ನು ನಿರ್ವಹಿಸಬೇಕು.

## ಅಧ್ಯಾಯ : 3
## ನಗರಪಾಲಿಕೆ ಅಧಿಕಾರಿಗಳು ಮತ್ತು ಚುನಾವಣೆ

ಪರಿಚ್ಛೇದ 6 : ನಗರಪಾಲಿಕೆ ಅಧಿಕಾರಿಗಳು
ನಗರಪಾಲಿಕೆಯ ದಕ್ಷ ಕಾರ್ಯನಿರ್ವಹಣೆ ಸಲುವಾಗಿ ಕೆಳಕಂಡ ಪ್ರತಿನಿಧಿಗಳು ಅಧಿಕಾರ ನಿರ್ವಹಿಸುತ್ತಾರೆ.
(ಎ) ಮೇಯರ್
(ಬಿ) ಚುನಾಯಿತ ಮಂಡಳಿ/ ಕೌನ್ಸಿಲ್
(ಸಿ) ಮಂಡಳಿಯ ಸ್ಥಾಯಿ ಸಮಿತಿ
(ಡಿ) ವಾರ್ಡ್ ಸಮಿರಿ
(ಇ) ನೆರೆಹೊರೆಯ ಪ್ರದೇಶ ಸಮಿತಿ
(ಎಫ್) ಆಯುಕ್ತರು

**ಪರಿಚ್ಛೇದ 7–**

(1) ನಗರಪಾಲಿಕೆ ಕೆಳಕಂಡವರನ್ನು ಒಳಗೊಳ್ಳತಕ್ಕದ್ದು –

(ಎ) ಮೇಯರ್
(ಬಿ) ವಾರ್ಡ್‌ಗಳ ಸಂಖ್ಯೆಗೆ ಸಮನಾದಷ್ಟು ಚುನಾಯಿತ ನಗರಪಾಲಿಕೆ ಸದಸ್ಯರು ಇರಬೇಕು
(ಸಿ) ಸರಕಾರದ ಅಧಿಸೂಚನೆಯ ಅನುಸಾರ ಸಂಚಾಲಕರ ಸಂಖ್ಯೆ 6ಕ್ಕಿಂತ ಕಡಿಮೆ ಇರಬಾರದು ಹಾಗೂ 12ನ್ನು ಮೀರಬಾರದು.
(ಡಿ) ವಿಧಾನಸಭೆಯ ಪ್ರತಿನಿಧಿಗಳ ಕ್ಷೇತ್ರಗಳು ನಗರದಲ್ಲಿರುತ್ತವೆ.
(ಇ) ರಾಜ್ಯ ವಿಧಾನ ಪರಿಷತ್ತಿನ ಪ್ರತಿನಿಧಿಗಳು ನಗರದಿಂದ ಚುನಾಯಿತರಾಗಿರಬಹುದು
(ಎಫ್ ) ರಾಜ್ಯ ವಿಧಾನ ಸಭೆಯ ಸದಸ್ಯರ ಕ್ಷೇತ್ರ ನಗರದ ಒಂದು ಭಾಗವನ್ನು ಒಳಗೊಂಡಿರಬಹುದು, ಇಲ್ಲವೇ ಇಡೀ ನಗರವನ್ನು ಒಳಗೊಂಡಿರಬಹುದು.
ನಗರಪಾಲಿಕೆಯಲ್ಲಿ ಕಡ್ಡಾಯ ಮೀಸಲು ಸ್ಥಾನಗಳ ವಿಚಾರ ಕರ್ನಾಟಕ ನಗರಪಾಲಿಕೆ ಕಾಯಿದೆ, 1976ರಲ್ಲಿ ಅಡಕವಾಗಿದ್ದು, ಪ್ರಸಕ್ತ ಕಾಯಿದೆಯಲ್ಲಿಯೂ ಅನ್ವಯವಾಗಿದೆ.

**ಪರಿಚ್ಛೇದ 8– ಮೇಯರ್ ಚುನಾವಣೆ**

(1 ) (ಎ) ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಕೊಂಡವರಿಂದ ಮೇಯರ್ ಆಯ್ಕೆಯಾಗುತ್ತಾರೆ. ಅದಕ್ಕೂ ನಿರ್ದಿಷ್ಟ ಪ್ರಕ್ರಿಯೆ ಇರುತ್ತದೆ.
1 ( ಎ) ನಗರಪಾಲಿಕೆಯ ಸಾಮಾನ್ಯ ಚುನಾವಣೆಯ ನಂತರ ಪಾಲಿಕೆಯ ಮೊದಲ ಸಭೆ ಸೇರುತ್ತದೆ.
1. ಒಬ್ಬರು ಸದಸ್ಯರು ಮೇಯರ್ ಆಗಿರುತ್ತಾರೆ.
2. ಮೇಯರ್ 5 ವರ್ಷ ಅಧಿಕಾರಾವಧಿಯಲ್ಲಿ ಇರಬಹುದು. ನಂತರ ಹೊಸ ಮೇಯರ್ ಬರುವ ತನಕ ಮುಂದುವರಿಯಬಹುದು.
(ಬಿ) ಮೇಯರ್ ಅಥವಾ ನಗರಪಾಲಿಕೆ ಸದಸ್ಯರು ನೆರೆಹೊರೆಯ ಸಮಿತಿಯ ಸಂಚಾಲಕರಾಗಲು ಅರ್ಹತೆ ಪಡೆಯುತ್ತಾರೆ.
(2) ಮೇಯರ್ ಚುನಾವಣೆಯನ್ನು ನಗರಪಾಲಿಕೆಯ ಸಾಮಾನ್ಯ ಚುನಾವಣೆಯ ವೇಳೆಯಲ್ಲಿಯೇ ನಡೆಸಬಹುದು.
(3) ಮೇಯರ್ ಸ್ಥಾನ ತೆರವಾದಾಗ ಹೊಸದಾಗಿ ಚುನಾವಣೆ ನಡೆಸಬೇಕು. ನೂತನ ಮೇಯರ್ ಆಯ್ಕೆಯಾಗಬೇಕು.

**ಪರಿಚ್ಛೇದ –9– ನಗರಪಾಲಿಕೆ ಸದಸ್ಯರ ಚುನಾವಣೆ**

(1) (ಎ) ನಗರಪಾಲಿಕೆ ಸದಸ್ಯರನ್ನು ಪ್ರತಿ ವಾರ್ಡ್‌ನಲ್ಲಿರುವ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡಿರುವ ನಾಗರಿಕರು ಚುನಾಯಿಸುತ್ತಾರೆ.
(ಬಿ) ನಗರಪಾಲಿಕೆ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸುತ್ತಿರುವವರು ಒಂದಕ್ಕಿಂತ ಹೆಚ್ಚು ಸಮಿತಿಗೆ ಸಂಚಾಲಕರಾಗಲು ಅರ್ಹತೆ ಪಡೆಯುವುದಿಲ್ಲ.
(2) ನಗರಪಾಲಿಕೆ ಸದಸ್ಯರ ಅಧಿಕಾರಾವಧಿ 5 ವರ್ಷ.
(3) ಸಾಮಾನ್ಯ ಚುನಾವಣೆಯ ಬಳಿಕ ನಗರಪಾಲಿಕೆಯ ಮೊದಲ ಸಭೆ ನಡೆದ ದಿನಾಂಕದಿಂದ ನಗರಪಾಲಿಕೆ ಸದಸ್ಯರ ಅವಧಿ ಆರಂಭವಾಗುತ್ತದೆ.
(4) ಯಾವುದೇ ಸದಸ್ಯರ ಸ್ಥಾನ ತೆರವಾದಲ್ಲಿ ಮುಂದಿನ 6 ತಿಂಗಳೊಳಗೆ ಚುನಾವಣೆ ನಡೆಸಿ ಭರ್ತಿಗೊಳಿಸಬೇಕು.
(5) ನಗರಪಾಲಿಕೆ ಸದಸ್ಯರ ಅವಧಿ ಮುಕ್ತಾಯಕ್ಕೆ 6 ತಿಂಗಳು ಮೊದಲು ಯಾವುದೇ ಸದಸ್ವತ್ವ ತೆರವಾದಲ್ಲಿ, ಅದಕ್ಕಾಗಿ ಚುನಾವಣೆ ನಡೆಸುವ ಅಗತ್ಯವಿಲ್ಲ.
(6) ಮೇಯರ್‌ಗೆ ಲಿಖಿತವಾಗಿ ತಿಳಿಸಿ ಯಾವುದೇ ನಗರಪಾಲಿಕೆ ಸದಸ್ಯ ರಾಜೀನಾಮೆ ಸಲ್ಲಿಸಬಹುದು.

**ಪರಿಚ್ಛೇದ 10– ಸ್ಥಾಯಿ ಸಮಿತಿಗಳು**

(1) ಮಹಾನಗರ ಪಾಲಿಕೆ ಶಾಸನಾತ್ಮಕ ಯೋಜನೆಗಳನ್ನು ಜಾರಿಗೊಳಿಸುವ ಪ್ರತಿಯೊಂದು ಕ್ಷೇತ್ರದಲ್ಲಿ ಸ್ಥಾಯಿ ಸಮಿತಿಗಳು ಇರುತ್ತವೆ.

(2) ಪ್ರತಿಯೊಂದು ಸ್ಥಾಯಿ ಸಮಿತಿ 5 ಸದಸ್ಯರನ್ನು ಒಳಗೊಂಡಿರುತ್ತದೆ. ಸಾಮಾನ್ಯ ಚುನಾವಣೆ ನಂತರ ಪಾಲಿಕೆಯ ಮೊದಲ ಸಭೆ ನಡೆಯುತ್ತದೆ. ಇದಾದ ಒಂದು ತಿಂಗಳೊಳಗೆ ಸ್ಥಾಯಿ ಸಮಿತಿಯ ಸಭೆ ನಡೆಯಬೇಕು.

(3) ಸ್ಥಾಯಿ ಸಮಿತಿಯ ಸದಸ್ಯರ ಅವಧಿಯು ಅವರು ಆಯ್ಕೆಯಾದ ದಿನದಿಂದ ಕನಿಷ್ಠ 1 ವರ್ಷದ ತನಕ ಇರಬೇಕು. ಸ್ಥಾಯಿ ಸಮಿತಿಯ ಮೂರು ಸಭೆಗಳಿಗೆ ನಿರಂತರವಾಗಿ ಸಮಿತಿಯ ಪೂರ್ವನುಮತಿ ಇಲ್ಲದೆ ಸದಸ್ಯ ಗೈರು ಹಾಜರಾದಲ್ಲಿ, ಸಮಿತಿಯಿಂದ ಆತನ ಸದಸ್ಯತ್ವವನ್ನು ರದ್ದುಗೊಳಿಸಬಹುದು.

(4) ಸ್ಥಾಯಿ ಸಮಿತಿಯಲ್ಲಿ ಸ್ಥಾನ ತೆರವಾದಲ್ಲಿ ಚುನಾವಣೆಯ ಮೂಲಕ ಭರ್ತಿ ಮಾಡಬೇಕು.

(5) ಸ್ಥಾಯಿ ಸಮಿತಿಯ ಸದಸ್ಯ ಯಾವುದೇ ಸಂದರ್ಭದಲ್ಲಿ  ಅಧ್ಯಕ್ಷರಿಗೆ ಲಿಖಿತವಾಗಿ ತಿಳಿಸಿ ತನ್ನ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬಹುದು. ಅಧ್ಯಕ್ಷರು ಇರದಿದ್ದಲ್ಲಿ ಮೇಯರ್‌ಗೆ ಸಲ್ಲಿಸಬಹುದು.

ಪರಿಚ್ಛೇದ 11– ಸ್ಥಾಯಿ ಸಮಿತಿ ಅಧ್ಯಕ್ಷ

(1) ಪ್ರತಿಯೊಂದು ಸ್ಥಾಯಿ ಸಮಿತಿಯಲ್ಲಿಒಬ್ಬ ಸದಸ್ಯರನ್ನು ಅಧ್ಯಕ್ಷರಾಗಿ ಚುನಾಯಿಸುತ್ತಾರೆ.

(2) ಅಧ್ಯಕ್ಷರು ತಮ್ಮ ಉತ್ತರಾಧಿಕಾರಿ ಧಿಕಾರ ವಹಿಸುವ ತನಕ ಮುಂದುವರಿಯುತ್ತಾರೆ. ಅಧ್ಯಕ್ಷರು ಮರು ಆಯ್ಕೆಯನ್ನು ನಿರೀಕ್ಷಿಸಬಹುದು.

(3) ಅಧ್ಯಕ್ಷರು ತಮ್ಮ ಸ್ಥಾನವನ್ನು ತೆರವುಗೊಳಿಸಬಹುದು.

(4) ಅಧ್ಯಕ್ಷ ಸ್ಥನ ತೆರವಾದಾಗ ಚುನಾವಣೆ ಮೂಲಕ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಬಹುದು.

## ಪರಿಚ್ಛೇದ 12– ಸ್ಥಾಯಿ ಸಮಿತಿ ಹಾಗೂ ಅಧ್ಯಕ್ಷರು

(1) ಕಾಯಿದೆಯ ಅನ್ವಯ ಸ್ಥಾಯಿ ಸಮಿತಿಗಳು ಅಗತ್ಯ ಬಿದ್ದಾಗ ಕಾನೂನು ಮತ್ತು ತಾತ್ವಿಕ ಮಟ್ಟದಲ್ಲಿ ಉಂಟಾಗಬೇಕಿರುವ ಬದಲಾವಣೆಗಳ ಬಗ್ಗೆ ಸಮಾಲೋಚನೆ ನಡೆಸುತ್ತವೆ.

(2) ಸ್ಥಯಿ ಸಮಿತಿಯ ಅಧ್ಯಕ್ಷರಿಗೆ ಕಾಯಿದೆಯ ಅಡಿಯಲ್ಲಿ ಪ್ರಸ್ತಾಪಗಳನ್ನು ಸಲ್ಲಿಸಲು ಅವಕಶವಿದೆ.

## ಅಧ್ಯಾ0ು 4– ಪ್ರಾದೇಶಿಕ ಯೋಜನೆ

## ಪರಿಚ್ಛೇದ 13– ಮಹಾ ನಗರಪಾಲಿಕೆ0ು ಯೋಜನಾ ಸಮಿತಿ

1. ಸಂವಿಧಾನದ 74ನೇ ತಿದ್ದುಪಡಿಯ ಅನ್ವಯ ಮಹಾ ನಗರಪಾಲಿಕೆಯ ಯೋಜನಾ ಸಮಿತಿ (ಎಂಪಿಸಿ) ರಚನೆಯಾಗುತ್ತದೆ.

2. ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಎಂಪಿಸಿಯ ಅಧ್ಯಕ್ಷರಾಗಿರುತ್ತಾರೆ. ಬಿಬಿಎಂಪಿಯ ಮೇಯರ್ ಉಪಾಧ್ಯಕ್ಷರಾಗಿರುತ್ತಾರೆ.

3. ಬಿಎಂಆರ್‌ಡಿಎಯ ಆಯುಕ್ತರು ಎಂಪಿಸಿಯ ಸದಸ್ಯ–ಕಾರ್ಯದರ್ಶಿಯಾಗಿರುತ್ತಾರೆ. ಬಿಎಂಆರ್‌ಡಿಎ ಎಂಪಿಸಿಯ ತಾಂತ್ರಿಕ ಮತ್ತು ಆಡಳಿತಾತ್ಮಕ ಶಾಖೆಯಂತೆ ಕಾರ್ಯನಿರ್ವಹಿಸುತ್ತದೆ. ಯೋಜನೆಯ ಅನುಷ್ಠಾನದಲ್ಲಿ ಬಿಎಂಆರ್‌ಡಿಎ ನೇರವಾಗಿ ಪಾಲ್ಗೊಳ್ಳುವುದಿಲ್ಲ.

4. ವರ್ಷಕ್ಕೆ ಎರಡು ಬಾರಿ ಎಂಪಿಸಿಯ ಪೂರ್ಣ ಪ್ರಮಾಣದ ಸಭೆ ನಡೆಯುತ್ತದೆ.

5. ಎಂಪಿಸಿಯು ಚುನಾಯಿತ ಮತ್ತು ನಾಮನಿರ್ದೇಶಿತ ಸದಸ್ಯರನ್ನು ಒಳಗೊಂಡಿದೆ.

( ಎ) 63 ಚುನಾಯಿತ ಸದಸ್ಯರಲ್ಲಿ 31 ಸದಸ್ಯರು ನಗರ ಸ್ಥಳೀಯಾಡಳಿತ ಸಂಸ್ಥೆಗಳಿಂದ ಹಾಗೂ 11 ಮಂದಿ ಗ್ರಾಮೀಣ ಸ್ಥಳಿಯಾಡಳಿತ ಸಂಸ್ಥೆಗಳಿಂದ ಆಯ್ಕೆಯಾಗಿರಬೇಕು.

(ಬಿ) ಈ ಸದಸ್ಯರು 3 ವಿಭಾಗಗಳಿಂದ ಚುನಾಯಿತರಾಗಬೇಕು. (1) ಬಿಬಿಎಂಪಿಯ ಸದಸ್ಯರು, (2) ನಗರ ಪಾಲಿಕೆಯ ಸದಸ್ಯರು (3) 314 ಗ್ರಾಮ ಪಂಚಾಯತಿಯ ಅಧ್ಯಕ್ಷರು, 12 ತಾಲೂಕು ಪಂಚಾಯತ್ ಮತ್ತು 3 ಜಿಲ್ಲಾ ಪಂಚಾಯತ್‌ನಿಂದ

ಆಯ್ಕೆಯಾಗಬೇಕು.
(ಸಿ) 21 ನಾಮನಿರ್ದೇಶಿತ ಸದಸ್ಯರ ಪೈಕಿ 10 ಮಂದಿ ಎಂಎಲ್ಎ, ಎಂಎಲ್‌ಸಿ, ಸಂಸದರು ಆಗಿರಬೇಕು.
(ಡಿ) ಉಳಿದ ಭಾಗವನ್ನು ನಾನಾ ಕ್ಷೇತ್ರಗಳ ತಜ್ಞರಿಂದ ಭರ್ತಿ ಮಡಬೇಕು. ಸಾರಿಗೆ, ಪೊಲೀಸ್, ಸಾರ್ವಜನಿಕ ಸುರಕ್ಷೆ, ಆರ್ಥಿಕಾಭಿವೃದ್ಧಿ, ಬಡತನ ನಿರ್ಮೂಲನೆ, ನಗರ ಪರಿಸರ, ಜಲ, ತ್ಯಾಜ್ಯ ವಸ್ತು ನಿರ್ವಹಣೆ, ಜಲ ಸಂಪನ್ಮೂಲದ ನಿರ್ವಹಣೆ, ಪರಂಪರೆ ಮತ್ತು ಸಂಸ್ಕೃತಿ, ರೋಗ್ಯ, ಗೃಹ ಮುಂತಾದ ಕ್ಷೇತ್ರಗಳ ಪರಿಣತರನ್ನು ಸೇರಿಸಿಕೊಳ್ಳಬಹುದು.

**ಪರಿಚ್ಛೇದ 14– ನಾಮನಿರ್ದೇಶಿತ ಸದಸ್ಯರ ಅವಧಿ**

ರಾಜ್ಯ ಸರಕಾರದಿಂದ 1ರಿಂದ 4ರ ತನಕ ಹಲವು ವರ್ಗಗಳಿಂದ ನಾಮ ನಿರ್ದೇಶಿಸಿದ ಸದಸ್ಯರ ಅವಧಿ ಎಂಪಿಸಿಯಲ್ಲಿ ಮೂರು ವರ್ಷಗಳನ್ನು ಮೀರಬಾರದು.

**ಪರಿಚ್ಛೇದ 15– ಪ್ರಧಾನ ಕಾರ್ಯಕಾರಿ ಸಮಿತಿ ಮತ್ತು ವಿಷಯ ಸಮಿತಿ**

1. ಪ್ರಧಾನ ಕಾರ್ಯಕಾರಿ ಸಮಿತಿ ರಚನೆಯಾಗಬೇಕು.
2. ಎಂಪಿಸಿ ಜಾರಿಗೊಳಿಸಿದ ಎಲ್ಲ ಯೋಜನೆಗಳನ್ನು ಕಾಲಾನುಸಾರ ಪರಿವೀಕ್ಷಿಸಿ ಪ್ರಗತಿ ವರದಿಯನ್ನು ಸಿದ್ಧಪಡಿಸಬೇಕು.
3. ಜಲ ಮತ್ತು ನೈರ್ಮಲ್ಯ, ಪರಿಸರ, ಸಾರಿಗೆ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಎಂಪಿಸಿಯು ವಿಷಯ ಸಮಿತಿಯನ್ನು ಒಳಗೊಳ್ಳಬೇಕು.
4. ವಿಷಯ ಸಮಿತಿಗಳ ನೆರವಿನಲ್ಲಿ ಕಾರ್ಯಕಾರಿ ಸಮಿತಿ ವರ್ಷದುದ್ದಕ್ಕೂ ಎಂಪಿಸಿಯ ಕಾರ್ಯಚಟುವಟಿಕೆಗಳ ಪರಿವೀಕ್ಷಣೆ ನಡೆಸುತ್ತದೆ.

ಪರಿಚ್ಛೇದ– 16– ಎಂಪಿಸಿಯ ಅಧಿಕಾರ ವ್ಯಾಪ್ತಿ

ಎಂಪಿಸಿಯ ಯೋಜನಾ ಅಧಿಕಾರ ವ್ಯಾಪ್ತಿ ಸುಮಾರು 8000 ಚದರ ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ (ಬಿಎಂಆರ್ ). ಮೂರು ಕಂದಾಯ ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರಂ ಜಿಲ್ಲೆಯನ್ನು ಇದು ಒಳಗೊಂಡಿದೆ.

ಪರಿಚ್ಛೇದ 17– ಯೋಜನೆ ಮತ್ತು ನಿಯಂತ್ರಣದ ಸಾಮಾನ್ಯಾಧಿಕಾರ

(1) ಸಮಗ್ರ ಯೋಜನೆಗೆ ಬೇಕಾದ ಸಿದ್ಧತೆ ಹಾಗೂ ನಿಯಂತ್ರಣ ವ್ಯವಸ್ಥೆಯನ್ನು ಬಿಎಂಆರ್‌ಡಿಎ ಕೈಗೊಳ್ಳುತ್ತದೆ.
(2) ಬಿಎಂಆರ್‌ಡಿಎ ಕಾರ್ಯಕಾರಿ ಸಮಿತಿಯನ್ನು ಹೊಂದಿರಬೇಕು.
(3) ಬಿಬಿಎಂಪಿ, ಬಿಎಂಆರ್‌ಡಿಎ ಮುಂತಾದವುಗಳು ಸಿದ್ಧಪಡಿಸಿದ ಯೋಜನೆಯ ಬಗ್ಗೆ ಎಂಪಿಸಿ ಸಲಹೆಗಳನ್ನು ನೀಡುತ್ತದೆ.
(4) ಸಮಿತಿಯು ಯೋಜನಾ ಪ್ರಾಧಿಕಾರವಾಗಿದ್ದು, ಕರ್ನಾಟಕ ಪಟ್ಟಣ ಮತ್ತು ಯೋಜನಾ ಕಾಯಿದೆ, 1961ರ 2ನೇ ಪರಿಚ್ಛೇದದ 7ನೇ ಅಧಿ ನಿಯಮದ ಅನ್ವಯ ಅಧಿಕಾರವನ್ನು ಹೊಂದಿದೆ.

ಪರಿಚ್ಛೇದ 18– ಸಮಗ್ರ ಯೋಜನೆ

(1) ಬಿಎಂಆರ್‌ಗೆ ಸಮಗ್ರ ಯೋಜನೆಯನ್ನು ಅಭಿವೃದ್ಧಿಪಡಿಸುವ ಹೊಣೆಯನ್ನು ಎಂಪಿಸಿ ಹೊಂದಿದೆ. ಇದರಲ್ಲಿ ಬಿಬಿಎಂಪಿ ವ್ಯಾಪ್ತಿಗೆ ಸೇರುವ ಮಾಸ್ಟರ್ ಪ್ಲಾನ್ ಕೂಡ ಸೇರಿಕೊಂಡಿದೆ.
(2) ಸಮಗ್ರ ಯೋಜನೆಯು ಮಹಾ ನಗರಪಾಲಿಕೆ ವ್ಯಾಪ್ತಿಯಲ್ಲಿ ರಾಜ್ಯ ಸರಕಾರ ಹಾಗೂ ಇತರ ಸಂಸ್ಥೆಗಳು ಕೈಗೊಂಡಿರುವ ಯೋಜನೆಗಳಿಗೆ ಒತ್ತು ನೀಡುವಂತಿರಬೇಕು.
ಈ ಯೋಜನೆಗೆ ರಾಜ್ಯ ಸರಕಾರದಿಂದ ಔಪಚಾರಿಕ ಅನುಮೋದನೆ ಪಡೆಯಬೇಕಾದ ಅಗತ್ಯವಿಲ್ಲ.
(3) ಯೋಜನೆಯಲ್ಲಿ ಕೆಳಕಂಡ ಕ್ಷೇತ್ರಗಳನ್ನು ಪರಿಗಣಿಸಬೇಕು.

1. ಸಾರಿಗೆ
2. ಪೊಲೀಸ್ ಮತ್ತು ಸಾರ್ವಜನಿಕ ಸುರಕ್ಷೆ
3. ಆರ್ಥಿಕ ಅಭಿವೃದ್ಧಿ
4. ಬಡತನ ನಿರ್ಮೂಲನೆ
5. ಗ್ರಾಮೀಣಾಭಿವೃದ್ಧಿ
6. ಜಲ, ನೈರ್ಮಲ್ಯ, ತ್ಯಾಜ್ಯ ನಿರ್ವಹಣೆ
7. ಪರಂಪರೆ ಮತ್ತು ಸಂಸ್ಕೃತಿ
8. ಆರೋಗ್ಯ
9. ಗೃಹನಿರ್ಮಾಣ

(4) ಯೋಜನೆ ಜಾರಿಗೊಳಿಸಬೇಕಾದ ಪ್ರದೇಶದ ಬಗ್ಗೆ ಸರ್ವೇಕ್ಷಣೆ ಕೈಗೊಳ್ಳಬೇಕು.
(5) ಬೆಂಗಳೂರು ಮಹಾ ನಗರಪಾಲಿಕೆಯ ಅಭಿವೃದ್ಧಿ ಯೋಜನೆಯ ವಿನ್ಯಾಸವನ್ನು ಸಮಿತಿ ಪರಿಷ್ಕರಿಸಬಹುದು.
(6) ಯೋಜನೆಯ ಎಲ್ಲ ಹಂತಗಳಲ್ಲಿ ಎಂಪಿಸಿ ಸಾರ್ವಜನಿಕ ಸಮಾಲೋಚನೆ ನಡೆಸಬೇಕು.

ಪರಿಚ್ಛೇದ 19– ವಾರ್ಡ್‌ಗಳ ನಿಷ್ಕರ್ಷೆ, ಇತ್ಯಾದಿ

(1) ನಗರಪಾಲಿಕೆ ಸದಸ್ಯರ ಚುನಾವಣೆಗೆ ಅನುಕೂಲವಾಗಲು ವಾರ್ಡ್‌ಗಳ ನಿಷ್ಕರ್ಷೆ ಸಹಾಯಕ
1. ವಿಸ್ತಾರವಾದ ನಗರವನ್ನು ವಿಂಗಡಿಸಲು ವಾರ್ಡ್‌ನಿಂದ ಸಾಧ್ಯ
2. ವಾರ್ಡ್‌ಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ, ಮಹಿಳೆಯರಿಗೆ ಮೀಸಲು ಕಲ್ಪಿಸಬೇಕು

ಪರಿಚ್ಛೇದ– 20– ವಾರ್ಡ್ ಸಮಿತಿ
(1) ನಗರಪಾಲಿಕೆಯ ಪ್ರತಿಯೊಂದು ವಾರ್ಡ್‌ನಲ್ಲಿಯೂ ವಾರ್ಡ್ ಸಮಿತಿ ಇರುತ್ತದೆ. ಪಾಲಿಕೆ ಚುನಾವಣೆ ಪೂರ್ಣವಾದ 45 ದಿನಗಳೊಳಗೆ ವಾರ್ಡ್ ಸಮಿತಿ ರಚನೆಯಾಗಬೇಕು.
(2) ಪ್ರತಿಯೊಂದು ಸಮಿತಿ ಇಂತಿರಬೇಕು–
1. ವಾರ್ಡನ್ನು ಪ್ರತಿನಿಧಿಸುವ ನಗರಪಾಲಿಕೆ ಸದಸ್ಯರಿರಬೇಕು. ಅವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಸದಸ್ಯರ ಸಂಖ್ಯೆ 12 ಮೀರಬಾರದು.

(3) ವಾರ್ಡ್ ಸಮಿತಿಗಳ ಸಭೆಗಳಲ್ಲಿ ಆಯುಕ್ತರು ಭಾಗವಹಿಸಬಹುದು. ಕಾರ್ಯಕ್ರಮಗಳಿಗೆ ಚಾಲನೆ ನೀಡಬಹುದು. ನಾನಾ ಇಲಾಖೆಗಳ ಪ್ರತಿನಿಧಿಗಳನ್ನು ವಿಶೇಷ ಆಹ್ವಾನಿತರಾಗಿ ಆಹ್ವಾನಿಸಬಹುದು.
(4) ಪದವಿಯಲ್ಲಿ ಸಹಾಯಕ ಆಯುಕ್ತರಿಗೆ ಕಡಿಮೆ ಇಲ್ಲದ ಅಧಿಕಾರಿ ವಾರ್ಡ್ ಸಮಿತಿಯ ಕಾರ್ಯದರ್ಶಿಯಾಗುತ್ತಾರೆ. ಸಮಿತಿಯ ಕಲಾಪಗಳ ವಿವರಗಳನ್ನು ಕಾರ್ಯದರ್ಶಿ ದಾಖಲಿಸುತ್ತಾರೆ. ವಾರ್ಡ್ ಸಮಿತಿಗೆ ಲಿಖಿತವಾಗಿ ತಿಳಿಸದೆ ಕಾರ್ಯದರ್ಶಿ ಸಭೆಗೆ ಗೈರು ಹಾಜರಾಗುವಂತಿಲ್ಲ.ಒಂದು ವೇಳೆ ತಪ್ಪಿದಲ್ಲಿ ಸಮಿತಿಯು ದಂಡ ವಿಧಿಸಬಹುದು. ಅಥವಾ ಅವರ ಬದಲಿಗೆ ಮತ್ತೊಬ್ಬರ ಸಮ್ಮುಖದಲ್ಲಿ ನಿರ್ಣಯಗಳಿಗೆ ಅನುಮೋದನೆ ಪಡೆದುಕೊಳ್ಳಬಹುದು.
(5) ವಾರ್ಡ್ ಸಮಿತಿಯ ಅವಧಿ ಮಂಡಳಿಯ ಅವಧಿಗೆ ಸಮಾನವಾಗಿರುತ್ತದೆ.
ಪರಿಚ್ಛೇದ 21– ನೆರೆಹೊರೆಯ ಪ್ರದೇಶ ಮತ್ತು ನೆರೆಹೊರೆಯ ಪ್ರದೇಶ ಸಮಿತಿ
1.(ಎ) ಪ್ರತಿಯೊಂದು ವಾರ್ಡ್‌ನಲ್ಲಿಯೂ 6ಕ್ಕಿಂತ ಕಡಿಮೆ ಇಲ್ಲದ, 12 ಮೀರದ ನೆರೆಹೊರೆಯ ಪ್ರದೇಶ ಸಮಿತಿ ಇರಬಹುದು.
(ಬಿ) 5 ಸಾವಿರ ಮತದಾರರಿಗಿಂತ ಕಡಿಮೆ ಇಲ್ಲದ ಸಮೂಹಕ್ಕೆ ಸಮಿತಿ ರಚಿಸಬಹುದು

2. ಪ್ರತಿಯೊಂದು ನೆರೆಹೊರೆಯ ಪ್ರದೇಶದಲ್ಲಿ ಸಮಿತಿ ಇರಬೇಕು.
ಪರಿಚ್ಛೇದ 22– ನೆರೆಹೊರೆಯ ಪ್ರದೇಶ ಸಮಿತಿಯ ಸಂಚಾಲಕರು

(1) ಪ್ರತಿಯೊಂದು ನೆರೆಹೊರೆಯ ಪ್ರದೇಶ ಸಮಿತಿಗೂ ಸಂಚಾಲಕರಿರಬೇಕು
(2) ಆಯಾ ಸಮಿತಿಯ ವ್ಯಾಪ್ತಿಯಲ್ಲಿನ ಮತದಾರ ಸಂಚಾಲಕ ಸ್ಥಾನಕ್ಕೆ ನಾಮಪತ್ರ ಸಲ್ಲಿಸಬಹುದು.

ಪರಿಚ್ಛೇದ 23– ನೆರೆಹೊರೆಯ ಪ್ರದೇಶ ಸಮಿತಿಯ ಚುನಾವಣೆ ಮತ್ತು ಸಂಚಾಲಕ
(1) ಸಮಿತಿಯ ಸ್ಥಾನಕ್ಕೆ ಎಷ್ಟು ಮಂದಿ ಬೇಕಾದರೂ ನಾಮ ಪತ್ರ ಸಲ್ಲಿಸಬಹುದು. ಆದರೆ ಅತಿ ಹೆಚ್ಚು ಮತ ಗಳಿಸುವ ಮೊದಲ ಐವರು ಅಭ್ಯರ್ಥಿಗಳು ಸಮಿತಿಯಲ್ಲಿ ಸ್ಥಾನ ಪಡೆಯುತ್ತಾರೆ. ಅವರಲ್ಲಿ ಅತಿ ಹೆಚ್ಚು ಮತ ಗಳಿಸಿದ ವ್ಯಕ್ತಿ ಸಂಚಾಲಕರಾಗುತ್ತಾರೆ.
(2) ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ ವ್ಯಕ್ತಿ ಸಂಚಾಲಕರಾಗುವಂತಿಲ್ಲ.
(3) ನಗರಪಾಲಿಕೆಗೆ ಚುನಾವಣೆ ನಡೆಯುವ ವೇಳೆಯಲ್ಲಿಯೇ ಸಮಿತಿ ಸಂಚಾಲಕ ಸ್ಥಾನಕ್ಕೆ ಚುನಾವಣೆ ನಡೆಯಬಹುದು.
(4) ಸಂಚಾಲಕರ ಅವಧಿ ಐದು ವರ್ಷ.
(5) ಸಂಚಾಲಕರ ಹುದ್ದೆ ತೆರವಾದರೆ ಹೊಸದಾಗಿ ಚುನಾವಣೆ ನಡೆಸಿ ಆಯ್ಕೆ ಪ್ರಕ್ರಿಯೆ ನಡೆಸಬೇಕು.
ಪರಿಚ್ಛೇದ 24– ಆಯುಕ್ತರ ಅಧಿಕಾರಾವಧಿ

(1) ಮೇಯರ್ ಜತೆ ಸಮಾಲೋಚನೆ ನಡೆಸಿದ ನಂತರ ಆಯುಕ್ತರನ್ನು ನೇಮಿಸಲಾಗುತ್ತದೆ. ಅವರು ನಗರಪಾಲಿಕೆ ಸದಸ್ಯರಾಗಿರಬಾರದು. ಆಯುಕ್ತರ ಅಧಿಕಾರಾವಧಿ 2 ವರ್ಷ.
ಪರಿಚ್ಛೇದ 25– ಆಯುಕ್ತರ ಸೇವೆ ಮತ್ತು ನಿಯಮಾವಳಿಗಳು

(1) ಸರಕಾರದ ಆದೇಶಗಳನುಸಾರ ಆಯುಕ್ತರು ಮಾಸಿಕ ವೇತನ ಮತ್ತು ಇತರ ಸೌಲಭ್ಯಗಳನ್ನು ಪಡೆಯುತ್ತಾರೆ.
(2) ನಗರಪಾಲಿಕೆಯಲ್ಲಿ ಆಯುಕ್ತರು ಪೂರ್ಣ ಪ್ರಮಾಣದ ಅಧಿಕಾರಿ.
(3) ಮೇಯರ್ ಹಾಗೂ ನಗರಪಾಲಿಕೆಯು ಆಯುಕ್ತರ ಸೇವೆಗೆ ಸಂಬಂಧಿಸಿ ಕಾಲಾನುಸಾರ ಆಯುಕ್ತರೊಡನೆ ಸಮಾಲೋಚಿಸಿ ಮುಂದಿನ ನಿಯಮಾವಳಿಗಳನ್ನು ತರಬಹುದು.
ಪರಿಚ್ಛೇದ 26– ಹಂಗಾಮಿ ಆಯುಕ್ತರು

ಆಯುಕ್ತರ ಗೈರು ಹಾಜರಿಯಲ್ಲಿ ಸರಕಾರ ಹಂಗಾಮಿ ಆಯುಕ್ತರನ್ನು ನೇಮಿಸಬಹುದು. ಈ ಅವಧಿಯಲ್ಲಿ ನೇಮಕಗೊಂಡ ಹಂಗಾಮಿ ಆಯುಕ್ತರಿಗೆ ಸಮಾನ ವೇತನ, ಭತ್ಯೆ, ಉತ್ತರದಾಯಿತ್ವ, ಬದ್ಧತೆ, ನಿರ್ಬಂಧ ಹಾಗೂ ನಿಯಮಾವಳಿಗಳು ಇರುತ್ತವೆ.
ಪರಿಚ್ಛೇದ 27– ಗೌರವ ಸಂಭಾವನೆ, ಶುಲ್ಕ ಮತ್ತು ಅನುಕೂಲ

(1) ನಗರಪಾಲಿಕೆ ಸದಸ್ಯರಿಗೆ ಮಾಸಿಕ 50 ಸಾವಿರ ರೂ.ಗೆ ಕಡಿಮೆ ಇಲ್ಲದಂತೆ ಗೌರವಧನ, ಭತ್ಯೆ ನೀಡಲಾಗುತ್ತದೆ. ಕಾಲಾನುಸಾರ ಇದು ಪರಿಷ್ಕರಣೆಯಾಗುತ್ತದೆ. ಮೇಯರ್, ಉಪ ಮೇಯರ್‌ಗೆ 70 ಸಾವಿರ ರೂ.ಗೆ ಕಡಿಮೆ ಇಲ್ಲದಂತೆ ಗೌರವ ಧನ, ಭತ್ಯೆ ನೀಡಲಾಗುತ್ತದೆ.
ಪರಿಚ್ಛೇದ 28– ಮೇಯರ್, ಪುರಪಿತೃ ಮತ್ತು ಸಂಚಾಲಕರ ಪ್ರಮಾಣ ವಚನ
(1) ಪ್ರತಿಯೊಬ್ಬ ಮೇಯರ್, ನಗರಪಾಲಿಕೆ ಸದಸ್ಯ ಅಥವಾ ಸಂಚಾಲಕರು ಅಧಿಕಾರ ಸ್ವೀಕರಿಸುವ ಮುನ್ನ ಪ್ರಮಾಣ ವಚನ ಮಾಡುತ್ತಾರೆ.
ದೇವರ ಹೆಸರಿನಲ್ಲಿ, ಸತ್ಯ ನಿಷ್ಠೆಯ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. ತಮ್ಮ ಕರ್ತವ್ಯವಗಳನ್ನು ಸತ್ಯ ಮತ್ತು ನಿಷ್ಠೆಯಿಂದ ನಿರ್ವಹಿಸುವ ವಾಗ್ದಾನ ನೀಡುತ್ತಾರೆ.
(2) ಕಾಯಿದೆ ಅನ್ವಯ ಮೇಯರ್  ಅಥವಾ ನಗರಪಾಲಿಕೆ ಸದಸ್ಯರಾಗಿ ಆಗಿ ಆಯ್ಕೆಯಾದ ಮೂರು ದಿನದೊಳಗೆ

ಪ್ರಮಾಣ ವಚನ ಸ್ವೀಕರಿಸಬೇಕು.

ಪರಿಚ್ಛೇದ 29– ಆಸ್ತಿ ವಿವರ ಘೋಷಣೆ

(1) ಪ್ರತಿಯೊಬ್ಬ ಮೇಯರ್, ಪುರಪಿತೃ ಅಥವಾ ಸಂಚಾಲಕ ಅಧಿಕಾರ ವಹಿಸಿದ ಒಂದು ತಿಂಗಳೊಳಗೆ ಹಾಗೂ ಪ್ರತಿ ವರ್ಷಾಂತ್ಯಕ್ಕೆ ತನ್ನ ಹಾಗೂ ಕುಟುಂಬದ ಎಲ್ಲ ಆಸ್ತಿಗಳ ವಿವರವನ್ನು ಘೋಷಿಸಬೇಕು.

(2) ಒಂದು ವೇಳೆ ಮೇಯರ್ ಅಥವಾ ಪುರಪಿತೃ ಆಸ್ತಿ ಘೋಷಣೆಯಲ್ಲಿ ವಿಫಲನಾದರೆ ಸೂಕ್ತ ಕ್ರಮ ಜರುಗಿಸಬಹುದು. ಸ್ಥಾನದಿಂದ ಅನರ್ಹಗೊಳಿಸಬಹುದು. ಆದರೆ ಈ ಕುರಿತ ಅಂತಿಮ ನಿರ್ಧಾರ ಸರಕಾರಕ್ಕೆ ಸೇರುತ್ತದೆ.

ಪರಿಚ್ಛೇದ 30– ಮತದಾನದ ಹಕ್ಕು

ಮತದಾರರ ಪಟ್ಟಿಯಲ್ಲಿ ಹೆಸರು ದಾಖಲಾಗಿದ್ದರೆ ಅಂತಹ ವ್ಯಕ್ತಿ ಮೇಯರ್ ಆಯ್ಕೆಗೆ ಮತ ಚಲಾಯಿಸಬಹುದು. ವಾರ್ಡಿನ ಪುರಪಿತೃವನ್ನು ಆಯ್ಕೆ ಮಾಡಬಹುದು. ನೆರೆಹೊರೆಯ ಪ್ರದೇಶ ಸಮಿತಿಯ ಸಂಚಾಲಕರನ್ನು ಆಯ್ಕೆ ಮಾಡಬಹುದು.ಆದರೆ ಯಾವುದೇ ನಿಯಮಾವಳಿಗಳ ಪ್ರಕಾರ ಅನರ್ಹತೆ ಇರಬಾರದು.

ಪರಿಚ್ಛೇದ 31– ಮತದಾರರ ಗುರುತಿನ ಚೀಟಿ

ರಾಜ್ಯ ಚುನಾವಣಾ ಆಯೋಗದ ನಿರ್ದೇಶನ ಮತ್ತು ನಿಯಂತ್ರಣದ ಅನ್ವಯ ಗುರುತಿನ ಚೀಟಿ ವಿತರಣೆ ನಡೆಯುತ್ತದೆ. ವಿಧನಸಭೆ ಚುನಾವಣೆಗೆ ನೀಡಿದ ಗುರುತಿನ ಚೀಟಿಯು ಈ ಚುನಾವಣೆಗೂ ಅನ್ವಯವಾಗುತ್ತದೆ.

ಪರಿಚ್ಛೇದ 32– ರಾಜ್ಯ ಚುನಾವಣಾ ಆಯೋಗ ಮತ್ತು ಚುನಾವಣೆ ದಿನಾಂಕ

(1) ಚುನಾವಣೆಯ ದಿನಾಂಕವನ್ನು ರಾಜ್ಯ ಚುನಾವಣಾ ಆಯೋಗ ನಿಗದಿಪಡಿಸುತ್ತದೆ.

ಪರಿಚ್ಛೇದ 33– ಅಭ್ಯರ್ಥಿಗಳ ಅರ್ಹತೆ

(1) ವಿಧಾನ ಸಭೆಯಿಂದ ಅನರ್ಹತೆ ಪಡೆದಿರಬಾರದು. ನಗರಪಾಲಿಕೆಯ ಸಿಬ್ಬಂದಿಯಾಗಿರಕೂಡದು. ರಾಜ್ಯ ಅಥವಾ ಕೇಂದ್ರ ಸರಕಾರದ ಉದ್ಯೋಗಿಯಾಗಿರಕೂಡದು. ಪ್ರತಿ ವಾರ್ಡಿನಲ್ಲಿ ಪುರಪಿತೃವಾಗಬಯಸುವವನು ಅದೇ ವಾರ್ಡಿನ ನಿವಾಸಿಯಾಗಿರಬೇಕು.

ಪರಿಚ್ಛೇದ– 34 – ಮೇಯರ್, ಪುರಪಿತೃ ಅಥವಾ ಸಂಚಾಲಕರ ಅನರ್ಹತೆ

1. ಕೆಳಕಂಡ ಕಾರಣಗಳಿದ್ದಲ್ಲಿ ಅಂಥ ವ್ಯಕ್ತಿ ಮೇಯರ್, ಪುರಪಿತೃ ಅಥವಾ ಸಂಚಾಲಕರಾಗುವಂತಿಲ್ಲ.

1. ಕ್ರಿಮಿನಲ್ ಕೋರ್ಟ್‌ನಿಂದ ದಂಡನೆಗೀಡಾಗಿ 6 ತಿಂಗಳಿಗಿಂತ ಹೆಚ್ಚು ಕಾಲ ಸೆರೆವಾಸ ಅನುಭವಿಸಿದ್ದರೆ,
2. ಅಸ್ಪೃಶ್ಯತಾ ಅಪರಾಧ ಕಾಯಿದೆ, 1965ರ ಅಡಿಯಲ್ಲಿ ತಪ್ಪಿತಸ್ಥನಾಗಿದ್ದರೆ, ಅಥವಾ ಆಹಾರ ಕಲಬೆರಕೆ ತಡೆ ಕಾಯಿದೆ , 1954ರ ಕಾಯಿದೆಯ ಅಡಿಯಲ್ಲಿ ದೋಷಿಯಾಗಿದ್ದರೆ,
3. ಕೇಂದ್ರ ಹಾಗೂ ರಾಜ್ಯ ಸರಕಾರದ ನಿಯಮಾವಳಿಗಳ ಪ್ರಕಾರ ಯಾವುದೇ ಲಾಭದಾಯಕ ಹುದ್ದೆಯಲ್ಲಿದ್ದರೆ,
4. ಸರಕಾರ ಅಥವಾ ಸ್ಥಳೀಯಾಡಳಿತದಿಂದ ವಜಾಗೊಂಡಿದ್ದರೆ,
5. ನ್ಯಾಯಾಂಗದಲ್ಲಿದ್ದುಕೊಂಡು ವೃತ್ತಿಯಿಂದ ಅಮಾನತುಗೊಂಡಿದ್ದರೆ,
6. ಮಾನಸಿಕ ರೋಗಿಯಾಗಿದ್ದರೆ,
7. ದಿವಾಳಿಯಾಗಿದ್ದರೆ,
8. ಭಾರತದ ಪೌರತ್ವ ಇಲ್ಲದಿದ್ದರೆ,
9. 25 ವರ್ಷಕ್ಕಿಂತ ಕಡಿಮೆ ವಯೋಮಾನ ಇದ್ದರೆ,
10. ನಗರಪಾಲಿಕೆ ಪರವಾಗಿ ಕಾನೂನು ಸೇವೆ ನೀಡುತ್ತಿದ್ದಲ್ಲಿ,
11. ಭ್ರಷ್ಟಾಚಾರ ಪ್ರಕರಣದಲ್ಲಿ ದೋಷಿ ಎಂದು ಸಾಬೀತಾಗಿದ್ದಲ್ಲಿ ಅಂಥಹ ಅಭ್ಯರ್ಥಿ ಅನರ್ಹನಾಗುತ್ತಾನೆ.

ಕೆಳಕಂಡ ಕಾರಣಗಳಿಗಾಗಿ ಅಭ್ಯರ್ಥಿ ಅನರ್ಹನಾಗುವುದಿಲ್ಲ :

1. ಯಾವುದೇ ಸ್ಥಿರಾಸ್ತಿಯ ಭೋಗ್ಯ, ಮಾರಾಟದ ಹಿತಾಸಕ್ತಿಯಲ್ಲಿ ಪಾಲು ಹೊಂದಿದ್ದರೆ, ಒಪ್ಪಂದ ಮಾಡಿಕೊಂಡಿದ್ದರೆ,
2. ಷೇರು ಕಂಪನಿಯಲ್ಲಿ ಪಾಲು ಹೊಂದಿದ್ದರೆ,
3. ನಗರಪಾಲಿಕೆಯ ಜಾಹೀರಾತುಗಳನ್ನು ಪ್ರಕಟಿಸುವ ಯಾವುದಾದರೂ ಪತ್ರಿಕೆಯಲ್ಲಿ ಪಾಲುದಾರಿಕೆ ಹೊಂದಿದ್ದಲ್ಲಿ,

4. ನಗರಪಾಲಿಕೆ ಜತೆಗಿನ ವ್ಯಾಪಾರ ನಡೆಸುತ್ತಿರುವ ಸಂಸ್ಥೆಯೊಂದರಲ್ಲಿ ಪಾಲುದಾರಿಕೆ ಹೊಂದಿದ್ದಲ್ಲಿ,

ಪರಿಚ್ಛೇದ 35– ಚುನಾವಣೆಗೆ ಸಂಬಂಧಿಸಿದ ಸಾಮಾನ್ಯ ನಿಯಮ

ಮೇಯರ್, ನಗರಪಾಲಿಕೆ ಸದಸ್ಯರ ಚುನಾವಣೆಯಲ್ಲಿ ಕರ್ನಾಟಕ ನಗರಪಾಲಿಕೆಯ ಕಾಯಿದೆ 1976ರ ನಿಯಮಗಳು ಸಾಮಾನ್ಯವಾಗಿ ಅನ್ವಯವಾಗುತ್ತವೆ.

ಅಧ್ಯಾಯ 5– ನಗರಪಾಲಿಕೆ ಅಧಿಕಾರಿಗಳ ಅಧಿಕಾರ ಮತ್ತು ಕಾರ್ಯವಿಧಾನ

ಪರಿಚ್ಛೇದ 36– ನಗರಪಾಲಿಕೆಯ ಸಾಮಾನ್ಯ ಅಧಿಕಾರ

(1) ಈ ಪರಿಚ್ಛೇದದ ಅಡಿಯಲ್ಲಿ ನಗರಪಾಲಿಕೆಯ ಬೈಲಾಗಳು, ನಿಯಂತ್ರಕ ವಿಧಾನಗಳು ರಚನೆಯಾಗುತ್ತವೆ.
(2) ಯಾವುದೇ ಪೂರ್ವಾಗ್ರಹವಿಲ್ಲದೆ ಎಲ್ಲ ಕರ್ತವ್ಯಗಳನ್ನು ನಗರಪಾಲಿಕೆ ಕೈಗೊಳ್ಳುವಂತೆ ಈ ಪರಿಚ್ಛೇದದಲ್ಲಿ ನಿಯಮಾವಳಿಗಳನ್ನು ರೂಪಿಸಲಾಗುವುದು

ಪರಿಚ್ಛೇದ 37– ಮೇಯರ್ ಅಧಿಕಾರ ಮತ್ತು ಕಾರ್ಯವಿಧಾನ
(1) ಮೇಯರ್ ನಗರಪಾಲಿಕೆಯ ಪ್ರತಿಯೊಂದು ಸಭೆಯಲ್ಲಿಯೂ ಭಾಗವಹಿಸಬೇಕು
(2) ಆಯುಕ್ತರಿಗೆ ನಗರಪಾಲಿಕೆಯ ಸ್ಥಾಯಿ ಸಮಿತಿಯ ಹಾಗೂ ಇತರ ಕೆಲಸಗಳಿಗೆ ಸಂಬಂಧಿಸಿ ಸೂಕ್ತ ನಿರ್ದೇಶನ ನೀಡುವ, ಕಾರ್ಯಗಳ ಪರಿವೀಕ್ಷಣೆ ನಡೆಸುವ ಅಧಿಕಾರ ಮೇಯರ್ ಅವರಿಗೆ ಇದೆ. ಹಾಗೂ ಆಯುಕ್ತರು ಅದಕ್ಕೆ ವಿಧೇಯರಾಗಬೇಕಾಗುತ್ತದೆ. ನಗರಪಾಲಿಕೆಗೆ ಸಂಬಂಧಪಟ್ಟ ಯಾವುದೇ ದಾಖಲೆಯನ್ನು ಆಯುಕ್ತರಿಂದ ತರಿಸಿಕೊಂಡು ಪರಿಶೀಲಿಸಬಹುದಾದ ಅಧಿಕಾರ ಮೇಯರ್‌ಗೆ ಇದೆ. ಹಾಗೂ ದಾಖಲೆಯನ್ನು ಪಡೆದ 15 ದಿನಗಳೊಳಗೆ ಹಿಂತಿಸರುಗಿಸಬೇಕಾಗುತ್ತದೆ.
(3) ಪುರಪಿತೃಗಳಿಗೆ ಲಿಖಿತ ಆದೇಶವನ್ನು ನೀಡಬಹುದು
(4) ಮೇಯರ್ ಯಾವುದೇ ಸ್ಥಾಯಿ ಸಮಿತಿಯ ಚುನಾಯಿತ ಅಧ್ಯಕ್ಷರಾಗುವಂತಿಲ್ಲ.
(5) ಮೇಯರ್ ಆಗಿ ಆಯ್ಕೆಯಾದ ವೇಳೆ ಯಾವುದಾದರೂ ಸ್ಥಾಯಿ ಸಮಿತಿ ಅಧ್ಯಕ್ಷ ಅಥವಾ ಸದಸ್ಯರಾಗಿದ್ದಲ್ಲಿ, ಆ ಸ್ಥಾನವನ್ನು ಅದನ್ನು ತೆರವುಗೊಳಿಸಬೇಕು
(6) ಸ್ಥಾಯಿ ಸಮಿತಿಯ ಯಾವುದೇ ಸ್ಥನ ತೆರವಾಗಿದ್ದಲ್ಲಿ ಮೇಯರ್ ನೇತೃತ್ವದಲ್ಲಿ ಸಭೆ ಕರೆದು ನೂತನ ಪದಾಧಿಕಾರಿಯನ್ನು ಆಯ್ಕೆ ಮಾಡಬಹುದು
(7) ಮೇಯರ್ ಸ್ಥಾನ 24 ಗಂಟೆಗೂ ಮೀರಿ ತೆರವಾದಲ್ಲಿ ನಗರಪಾಲಿಕೆ ಹಂಗಾಮಿ ಮೇಯರ್‌ನನ್ನು ನೇಮಕಗೊಳಿಸಬೇಕು.
ಪರಿಚ್ಛೇದ 37 ಎ– ಮೇಯರ್ ಸಮಿತಿ
1. ಮೇಯರ್‌ಗೆ ಕೆಲಸ ಕಾರ್ಯಗಳಲ್ಲಿ ಮೇಯರ್ ಸಮಿತಿ ಸಹಕರಿಸುತ್ತದೆ. ಮೇಯರ್ ಹೊರತುಪಡಿಸಿ 8 ಪಾಲಿಕೆಯ ಚುನಾಯಿತ ಮತ್ತು ನಾಮನಿರ್ದೇಶಿತ ಸದಸ್ಯರನ್ನು ಈ ಸಮಿತಿ ಒಳಗೊಳ್ಳುತ್ತದೆ.
2. ಈ ಸದಸ್ಯರು ಹಣಕಾಸು, ಯೋಜನೆ, ಸಮಾಜ ಸೇವೆ, ಆಡಳಿತ ಮತ್ತು ಯೋಜನೆ ಮುಂತಾದ ಅಗತ್ಯ ಕ್ಷೇತ್ರಗಳಲ್ಲಿ ಪರಿಣಿತರಾಗಿರುತ್ತಾರೆ.
3. ಈ ಸಮಿತಿಯ ಸದಸ್ಯರ ಅವಧಿ ಮೇಯರ್ ಅವಧಿಯ ತನಕ ಇರುತ್ತದೆ.

ಪರಿಚ್ಛೇದ 38– ನಗರಪಾಲಿಕೆಯ ಕಡ್ಡಾಯ ಕರ್ತವ್ಯಗಳು

(1) ಬಿಬಿಎಂಪಿ ಭೂ ಅಭಿವೃದ್ಧಿ ಬ್ಯಾಂಕ್‌ನ ರಿಜಿಸ್ಟ್ರಾರ್ ಅನ್ನು ನಿರ್ವಹಿಸಬೇಕು. ಅದರಲ್ಲಿ ಕೆಳಕಂಡ ಅಂಶಗಳಿರಬೇಕು.
(ಎ) ಬಿಬಿಎಂಪಿಗೆ ಸೇರಿದ ಎಲ್ಲ ಭೂಮಿಯ ಸ್ವರೂಪ ಮತ್ತು ಬಳಕೆಯ ವಿವರ

(ಬಿ) ಸರಕಾರಿ ಜಮೀನು, ಸಾರ್ವಜನಿಕ ಕ್ಷೇತ್ರಗಳ ಕಂಪನಿಗಳ ಜಮೀನು, ಅವುಗಳ ಸ್ವರೂಪ ಮತ್ತು ಬಳಕೆ
(ಸಿ) ಬಿಬಿಎಂಪಿ ವ್ಯಾಪ್ತಿಯಲ್ಲಿನ ಎಲ್ಲ ಖಾಸಗಿ ಜಮೀನುಗಳ ವಿವರ, ಬಳಕೆಯ ಮಾಹಿತಿ
(2) ಭೂ ಅಭಿವೃದ್ಧಿ ಬ್ಯಾಂಕ್‌ನ ದಾಖಲೆಗಳು ಸಾರ್ವಜನಿಕ ದಾಖಲೆಯಾಗಿದ್ದು ಸಾರ್ವಜನಿಕರ ಪರಿವೀಕ್ಷಣೆಗೆ ಲಭ್ಯ
(3) ಭೂ ಅಭಿವೃದ್ಧಿ ಬ್ಯಾಂಕ್‌ನ ದಾಖಲೆಗಳನ್ನು ಪರಿಷ್ಕರಿಸುವುದು ಬಿಬಿಎಂಪಿಯ ಹೊಣೆ
(4) ನಗರದ ಗಡಿ ರೇಖೆಯನ್ನು ನಿರ್ವಹಿಸುವುದು ನಗರಪಾಲಿಕೆಯ ಹೊಣೆ
(5) ಸಾರ್ವಜನಿಕ ರಸ್ತೆ, ನೀರು ಸರಬರಾಜು, ನೈರ್ಮಲ್ಯ, ಒಳಚರಂಡಿ, ಸಾರ್ವಜನಿಕ ಸ್ಥಳಗಳ ಸುರಕ್ಷೆ, ತ್ಯಾಜ್ಯ ನಿರ್ವಹಣೆ ಮುಂತಾದ ಜವಾಬ್ದಾರಿ ಪಾಲಿಕೆಗೆ ಇದೆ.
(6) ಬೀದಿ ದೀಪ, ಮಾರುಕಟ್ಟೆ ಪ್ರದೇಶಗಳ ನವೀಕರಣ ಕೆಲಸ ಪಾಲಿಕೆಗೆ ಸೇರಿದೆ.
(7) ನಗರಪಾಲಿಕೆ ಕಚೇರಿಯ ನಿರ್ವಹಣೆ, ಸಾರ್ವಜನಿಕ ಸ್ಮಾರಕಗಳ ನಿರ್ವಹಣೆ, ಆಸ್ತಿಗಳ ಸಂರಕ್ಷಣೆ, ಉತ್ತರದಾಯಿತ್ವ, ಪಾರದರ್ಶಕತೆ ಪಾಲಿಕೆಯ ಕರ್ತವ್ಯ.
(8) ರಸ್ತೆಗಳ ನಾಮಕರಣ
(9) ಅಪಾಯಕಾರಿ ವೃತ್ತಿಗಳಿಗೆ ತಡೆ
(10) ಅನಾಥ ಶವಗಳ ಸಂಸ್ಕಾರ
(11) ಸಾರ್ವಜನಿಕ ಮಾರುಕಟ್ಟೆಗಳ ನಿರ್ಮಾಣ, ಕಸಾಯಿಖಾನೆಯ ಮೇಲ್ವಿಚಾರಣೆ, ನಿಯಂತ್ರಣ
(12) ಬೀದಿ ನಾಯಿಗಳ ನಿಯಂತ್ರಣ
(13) ಹೊಸ ರಸ್ತೆಗಳ ನಿರ್ಮಾಣ
(14) ಪ್ರಾಥಮಿಕ ಶಾಲೆಗಳ ನಿರ್ವಹಣೆ
(15) ಪಶು ಸಂಗೋಪನೆ
(16) ಸಾರ್ವಜನಿಕ ಲಸಿಕೆ ಪೂರೈಕೆ
(17) ನಗರದ ನೈರ್ಮಲ್ಯಕ್ಕೆ ಕಾರ್ಯಕ್ರಮ
(18) ಗಿಡಗಳನ್ನು ನೆಡುವಿಕೆ
(19) ನಗರದ ಜಲಾಶಯಗಳ ನಿರ್ವಹಣೆ
(20) ಮಾರಕ ರೋಗಗಳ ವಿರುದ್ಧ ಹತೋಟಿ ಕ್ರಮ
(21) ಆರ್ಥಿಕ ದುರ್ಬಲರ ಏಳಿಗೆಗೆ ಕ್ರಮ
(22) ಸಾರ್ವಜನಿಕ ಉದ್ಯಾನಗಳ ನಿರ್ವಹಣೆ, ಆಟದ ಮೈದಾನಗಳ ನಿರ್ವಹಣೆ
(23) ವಸತಿ ಗೃಹ, ವಿಶ್ರಾಂತಿ ಗೃಹಗಳ ನಿಯಂತ್ರಣ
(24) ಳಚರಂಡಿಗಳ ನಿರ್ವಹಣೆ
(25) ಜನನ ಮತ್ತು ಮರಣ ನೋಂದಣಿ
(27) ನಗರದ ಹವಾಮಾನದ ಮೇಲೆ ನಿಗಾ
(28) ನಗರದ ಕೊರತೆಗಳ ನಿವಾರಣೆಗೆ ಕ್ರಮ, ಪರಿಹಾರೋಪಾಯ
(29) ವಿಕಲಚೇತನರ ಕಲ್ಯಾಣಕ್ಕೆ ಕಾರ್ಯಕ್ರಮ
(30) ಅನಾಥಾಲಯ, ಅನಾಥ ಕೇಂದ್ರಗಳ ನಿರ್ಮಾಣ, ನಿರ್ವಹಣೆ
(31) ತಾಯ್ತನದ ಆರೈಕೆಗೆ ವ್ಯವಸ್ಥೆ, ಶಿಶು ಕಲ್ಯಾಣ ಕಾರ್ಯಕ್ರಮ
(32) ನಿರಾಶ್ರಿತರಿಗೆ ವಸತಿ ವ್ಯವಸ್ಥೆ
(33) ಕೊಳ:ಚೆ ನಿರ್ಮೂಲನೆ

ಪರಿಚ್ಛೇದ 39 – ನಗರಪಾಲಿಕೆಯ ಉಪಕ್ರಮಗಳು

(1) ಸಂಘಟನೆ, ರಾಸಾಯನಿಕ, ಬ್ಯಾಕ್ಟೀರಿಯಾ ಸಂಬಂಧಿ ಪ್ರಯೋಗಾಲಯಗಳಲ್ಲಿ ನೀರು, ಆಹಾರ , ಔಷಧಗಳ ಪ್ರಯೋಗ, ವಿಶ್ಲೇಷಣೆ, ರೋಗಗಳ ನಿಯಂತ್ರಣಕ್ಕೆ ಸಂಶೋಧನೆ, ಸಾರ್ವಜನಿಕ ಆರೋಗ್ಯದ ಹಿತಾಸಕ್ತಿಗೆ ಕ್ರಮ

(2) ಈಜುಕೊಳ, ಸಾರ್ವಜನಿಕ ಸ್ನಾನ ಗೃಹ, ಕೈ ತೊಳೆಯುವ ಸ್ಥಳಗಳ ನಿರ್ವಹಣೆ
(3) ಸಾರ್ವಜನಿಕ ರಸ್ತೆಗಳು ಮತ್ತು ಸ್ಥಳಗಳಲ್ಲಿ ಕುಡಿಯುವ ನೀರಿನ ಪೂರೈಕೆಗೆ ವ್ಯವಸ್ಥೆ, ನಿರ್ವಹಣೆ, ಪಶುಗಳಿಗೂ ಕುಡಿಯುವ ನೀರಿನ ವ್ಯವಸ್ಥೆ
(4) ಕಟ್ಟಡ ಅಥವಾ ಭೂಮಿಯ ಸರ್ವೇಕ್ಷಣೆ
(5) ಸಾರ್ವಜನಿಕ, ಖಾಸಗಿ ಜಾಗದಲ್ಲಿ ಗಿಡ ಮರಗಳನ್ನು ಬೆಳೆಸಲು ಉತ್ತೇಜನ
(6) ಆರೋಗ್ಯ ಕೇಂದ್ರಗಳ ಪಾಲನೆ
(7) ಪಶು ಚಿಕಿತ್ಸಾಲಯ ಸ್ಥಪನೆ ಮತ್ತು ನಿರ್ವಹಣೆ
(8) ಅಗತ್ಯ ಇದ್ದಲ್ಲಿ ವ್ಯಾಪಾರ ಮಳಿಗೆ, ಸಂಕೀರ್ಣ
(9) ನಗರಪಾಲಿಕೆ ಅಧಿಕಾರಿ, ಸಿಬ್ಬಂದಿಗೆ ವಸತಿ ವ್ಯವಸ್ಥೆ
(10) ನಗರಪಾಲಿಕೆ ಸಬ್ಬಂದಿಗೆ ಕಟ್ಟಡ ನಿರ್ಮಾಣ ಸಂಬಂಧ ಸಾಲ
(11) ನಗರಪಾಲಿಕೆ ಸಿಬ್ಬಂದಿ ಕಲ್ಯಾಣ ಕಾರ್ಯಕ್ರಮ
(12) ವಸ್ತು ಸಂಗ್ರಹಾಲಯ, ಚಿತ್ರ ಕಲಾಶಾಲೆ, ಮೃಗಾಲಯಗಳ ನಿರ್ವಹಣೆ
(13) ನೈಸರ್ಗಿಕ ವಿಪತ್ತು ಎದುರಿಸಲು ಸಾರ್ವಜನಿಕ ನಿಧಿ
(14) ಕಾಯಿದೆ, ಬೈಲಾ, ನಿಯಮಾವಳಿಗಳ ಉಲ್ಲಂಘನೆ ಬಗ್ಗೆ ಮಾಹಿತಿ ನೀಡಿದವರಿಗೆ ಬಹುಮಾನ
(15) ಬಡ ಮತ್ತು ದುರ್ಬಲ ವರ್ಗದವರಿಗೆ ಗೃಹ ನಿರ್ಮಾಣ
(16) ನಗರ ಅರಣ್ಯ ಅಭಿವೃದ್ಧಿ, ಹಸಿರು ಪರಿಸರ ರಕ್ಷಣೆ
(17) ಸಂಸ್ಕೃತಿ, ಕಲೆ, ಶಿಕ್ಷಣಕ್ಕೆ ಉತ್ತೇಜನ
(18) ಸಾರ್ವಜನಿಕ ಮನರಂಜನಾ ಕಾರ್ಯಕ್ರಮಗಳು, ಆಚರಣೆಗಳಿಗೆ ಪ್ರೋ
(19) ಸಾರ್ವಜನಿಕರ ಸುರಕ್ಷತೆಗೆ ಒತ್ತು
(20) ಸಾರ್ವಜನಿಕರ ಆರೋಗ್ಯಾಭಿವೃದ್ಧಿಗೆ ಕ್ರಮ

ಪರಿಚ್ಛೇದ 40 – ನಗರಪಾಲಿಕೆ ಆಸ್ತಿ
ಕಾಯಿದೆಯ ಪ್ರಕಾರ ಕೆಳಕಂಡವುಗಳು ನಗರಪಾಲಿಕೆಯ ಆಸ್ತಿಗಳಾಗಿದ್ದು, ಅವುಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಪಾಲಿಕೆಯ ಜವಾಬ್ದಾರಿಯಾಗಿರುತ್ತದೆ.
(1) ಎಲ್ಲ ಉದ್ಯಾನಗಳು, ಆಟದ ಮೈದಾನಗಳು ಹಾಗೂ ತೆರೆದ ಪ್ರದೇಶಗಳು
(2) ಎಲ್ಲ ಸಾರ್ವಜನಿಕ ದೀಪಗಳು
(3) ದ್ವಾರಗಳು, ಮಾರುಕಟ್ಟೆ, ಕಸಾಯಿ ಖಾನೆ, ಸಾರ್ವಜನಿಕ ಕಟ್ಟಡಗಳು

ಪರಿಚ್ಛೇದ 41– ಸ್ಥಾಯಿ ಸಮಿತಿಯ ಕಾರ್ಯಚಟುವಟಿಕೆಗಳು
(1) ನಗರಪಾಲಿಕೆಯ ಸಮಸ್ತ ಯೋಜನೆಗಳು, ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸ್ಥಾಯಿ ಸಮಿತಿಯ ಪಾತ್ರ ಮಹತ್ವದ್ದಾಗಿದೆ. ಪ್ರತಿಯೊಂದು ವಲಯಕ್ಕೆ ಸಂಬಂಧಿಸಿ ಸ್ಥಾಯಿ ಸಮಿತಿಗಳು ಕಾರ್ಯನಿರ್ವಹಿಸುತ್ತವೆ. ಆಯಾ ವಲಯಕ್ಕೆ ಸಂಬಂಧಿಸಿ ಆಯಾ ಸ್ಥಾಯಿ ಸಮಿತಿ ಕ್ರಮ ಕೈಗೊಳ್ಳುತ್ತದೆ.
(2) ಪ್ರತಿಯೊಂದು ಸ್ಥಾಯಿ ಸಮಿತಿಯ ನಿಯಂತ್ರಣ, ಉದ್ದೇಶ, ನಿರ್ಧಾರ ಪ್ರಕ್ರಿಯೆ, ಕರ್ತವ್ಯಗಳನ್ನು ಪಾಲಿಕೆಯ ಕಾಯಿದೆಯ ಚೌಕಟ್ಟು ಹೊಂದಿರುತ್ತದೆ.
(3) ಲೆಕ್ಕ ಪರಿಶೋಧನೆ ಕುರಿತ ಸ್ಥಾಯಿ ಸಮಿತಿಗೆ ಹೆಚ್ಚುವರಿಯಾಗಿ ಕೆಳಕಂಡ ಕರ್ತವ್ಯಗಳಿರುತ್ತವೆ–
(ಎ) ಬಜೆಟ್ ಅನುದಾನದ ಬಳಕೆಯ ಪರಿಶೀಲನೆ
(ಬಿ) ನಗರಪಾಲಿಕೆಯ ನಿಧಿಯ ಅಂದಾಜು ಖರ್ಚು ವೆಚ್ಚಗಳ ವಿಶ್ಲೇಷಣೆ
(ಸಿ) ಮಾಸಿಕ ಲೆಕ್ಕ ಪರಿಶೋಧನೆಯನ್ನು ಹಮ್ಮಿಕೊಳ್ಳುವುದು
(ಡಿ) ಯಾವುದೇ ನಷ್ಟದ ಅಂದಾಜು
(4) ಸ್ಥಾಯಿ ಸಮಿತಿ ಬಯಸಿದಲ್ಲಿ ಅಗತ್ಯ ಸಿಬ್ಬಂದಿಗಳನ್ನು ಪಾಲಿಕೆ ಒದಗಿಸುತ್ತದೆ.

ಪರಿಚ್ಛೇದ 42– ವಾರ್ಡ್ ಸಮಿತಿಯ ಕರ್ತವ್ಯ

ವಾರ್ಡ್ ಸಮಿತಿಗಳಿಗೆ ಕೆಳಕಂಡ ಕರ್ತವ್ಯಗಳಿವೆ–

(ಎ) ಮೇಲ್ವಿಚಾರಣೆಗೆ ನೆರವು, ವಾರ್ಡ್‌ನಲ್ಲಿ ಘನ ತ್ಯಾಜ್ಯ ನಿರ್ವಹಣೆ, ನೈರ್ಮಲ್ಯ ಚಟುವಟಿಕೆ, ಉದ್ಯಾನಗಳ ನಿರ್ವಹಣೆ, ವಾರ್ಡ್‌ನ ಬೀದಿ ದೀಪಗಳ ನಿರ್ವಹಣೆ

(ಬಿ) ವಾರ್ಡ್‌ನಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನೆರವು

(ಸಿ) ವಾರ್ಡ್‌ನ ಸಮುದಾಯದಲ್ಲಿ ಭಾವೈಕ್ಯತೆಗೆ ಉತ್ತೇಜನ, ಸಾಮಾಜಿಕ ಸಾಂಸ್ಕೃತಿಕ ಕಾರ್ಯಕ್ರಮ

(ಡಿ) ಸಮಾಜ ಕಲ್ಯಾಣ ಹಾಗೂ ಅಭಿವೃದ್ಧಿಪರ ಕಾರ್ಯಕ್ರಮಗಳ ಪ್ರಚಾರ, ಫಲಾನುಭವಿಗಳನ್ನು ಗುರುತಿಸಲು ನೆರವು

(ಇ) ಸ್ಥಳೀಯ ಮಟ್ಟದಲ್ಲಿ ಪರ್ಯಾಯ ಅನುಷ್ಠಾನ ಕಾರ್ಯಕ್ರಮಗಳಿಗೆ ಉತ್ತೇಜನ

(ಎಫ್ ) ತೆರಿಗೆ, ಶುಲ್ಕಗಳನ್ನು ಸಂಗ್ರಹಿಸಲು ಪಾಲಿಕೆಗೆ ನೆರವು

(ಜಿ) ಸಾರ್ವಜನಿಕ ಮೂಲ ಸೌಕರ್ಯ ಅಭಿವೃದ್ಧಿಗೆ ನೆರವು

ಪರಿಚ್ಛೇದ 43– ವಾರ್ಡ್ ಸಮಿತಿಯ ಹಕ್ಕುಗಳು

(1) ವಾರ್ಡ್‌ಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಆಯುಕ್ತರಿಂದ ಪಡೆಯಬಹುದು

(2) ವಾರ್ಡ್‌ಗೆ ಸಂಬಂಧಿಸಿ ನಿಯಮಿತವಾಗಿ ವರದಿಗಳನ್ನು ಸಲ್ಲಿಸಬಹುದು

(3) ಇವುಗಳಲ್ಲದೆ ಇನ್ನೂ ಕೆಲವು ಹಕ್ಕುಗಳು ಪ್ರತಿ ಸಮಿತಿಗೆ ಇವೆ–

1. ಎಲ್ಲ ಅಭಿವೃದ್ಧಿ ಪರ ಯೋಜನೆಗಳ ಮಾಹಿತಿ ಪಡೆಯಬಹುದು
2. ನಗರಪಾಲಿಕೆಯ ಸಮಗ್ರ ಬಜೆಟ್ ವಿವರ ಪಡೆಯಬಹುದು, ಸ್ಪಷ್ಟನೆ ನಿರೀಕ್ಷಿಸಬಹುದು
3. ತೆರಿಗೆ, ಕಂದಾಯ ಬಗ್ಗೆ ಸಮಗ್ರ ವಿವರ ಪಡೆಯಬಹುದು

ಪರಿಚ್ಛೇದ 44– ನೆರೆಹೊರೆಯ ಪ್ರದೇಶ ಸಮಿತಿಯ ಕಾರ್ಯ ವಿಧಾನ

(ಎ) ನಾನಾ ಯೋಜನೆಗಳಿಗೆ ಸಂಬಂಧಿಸಿ ನೆರೆಹೊರೆಯ ಪ್ರದೇಶದಿಂದ ಫಲಾನುಭವಿಗಳನ್ನು ಗುರುತಿಸುವುದು.

(ಬಿ) ಸರಕಾರ ಮತ್ತು ನಗರಪಾಲಿಕೆಯಿಂದ ಸವಲತ್ತುಗಳನ್ನು ಪಡೆಯುವ ವ್ಯಕ್ತಿಯ ಅರ್ಹತೆಯನ್ನು ಪರಿಶೀಲಿಸುವುದು

(ಸಿ) ನಾನಾ ಅಭಿವೃದ್ಧಿಪರ ಚಟುವಟಿಕೆಗಳ ಪ್ರಸ್ತಾಪ ಸಲ್ಲಿಕೆ

(ಡಿ) ಅಭಿವೃದ್ಧಿ ಚಟುವಟಿಕೆಗಳಲ್ಲಿನ ಕೊರತೆ, ನ್ಯೂನತೆಗಳನ್ನು ಪತ್ತೆ ಹಚ್ಚುವುದು

(ಇ) ವಾರ್ಡ್ ಸಮಿತಿಯೊಡನೆ ಸಹಕಾರ

ಪರಿಚ್ಛೇದ 45– ನೆರೆಹೊರೆಯ ಪ್ರದೇಶ ಸಮಿತಿಯ ಹಕ್ಕುಗಳು –

(1) ಆದ್ಯತೆಯ ಮೇರೆಗೆ ಅಭಿವೃದ್ಧಿಪರ ಯೋಜನೆಗಳ ಪ್ರಸ್ತಾಪ

(2) ಅಭಿವೃದ್ಧಿ ಯೋಜನೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆಯುವುದು, ಭವಿಷ್ಯದಲ್ಲಿ ನಿರ್ವಹಿಸುವ ಬಗ್ಗೆ ಪ್ರಸ್ತಾಪ

(3) ವಾರ್ಡ್ ಸಮಿತಿಯ ಜತೆ ಮಾಹಿತಿ ವಿನಿಮಯ

(4) ಅಭಿವೃದ್ಧಿಪರ ಕಾರ್ಯಕ್ರಮಗಳಿಗೆ ದೇಣಿಗೆ, ವಂತಿಗೆ, ಶ್ರಮದಾನ, ಸಮಾಜ ಸೇವಕರ ನೆರವು

(5) ಸ್ವಚ್ಛತೆ, ಪರಿಸರ ರಕ್ಷಣೆ, ಮಾಲಿನ್ಯ ನಿಯಂತ್ರಣದ ಬಗ್ಗೆ ಜನ ಜಾಗೃತಿ

(6) ಸಾಮಾಜಿಕ ಸೌಹಾರ್ದತೆ

ಪರಿಚ್ಛೇದ 46– ಸ್ಥಾಯಿ ಸಮಿತಿ ಮತ್ತು ಆಯುಕ್ತರ ಅಧಿಕಾರ

(1) ಆಯುಕ್ತರು ಯಾವುದೇ ನಿರ್ಣಯ, ಅಧಿಕಾರ, ನಿಯಮಾವಳಿಗಳನ್ನು ಜಾರಿಗೊಳಿಸಲು, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮುನ್ನ ಸ್ಥಾಯಿ ಸಮಿತಿಯ ಜತೆ ಸಮಾಲೋಚನೆ ನಡೆಸಿ ಸಮ್ಮತಿ ಪಡೆಯಬೇಕಾಗುತ್ತದೆ.

ಪರಿಚ್ಛೇದ 47– ಆಯುಕ್ತರ ಕಾರ್ಯವಿಧಾನ

(1) ಕಾಯಿದೆಯ ಅಡಿಯಲ್ಲಿ ಆಯುಕ್ತರ ಕಾರ್ಯವಿಧಾನಕ್ಕೆ ಸಂಬಂಧಿಸಿ ಹಲವಾರು ಅಂಶಗಳಿವೆ. ನಿಬಂಧನೆಗಳಿವೆ. ಅವುಗಳು ಕೆಳಕಂಡಂತಿವೆ–

(ಎ) ಕಾಯಿದೆಯ ಅನ್ವಯ ಎಲ್ಲ ಕರ್ತವ್ಯ, ಅಧಿಕಾರಗಳನ್ನು ಆಯುಕ್ತರು ನಿರ್ವಹಿಸಬೇಕು

(ಬಿ) ಯಾವುದೇ ತುರ್ತು ಸಂದರ್ಭದಲ್ಲಿ ಸಾರ್ವಜನಿಕ ಹಿತಾಸಕ್ತಿ, ಭದ್ರತೆಯ ರಕ್ಷಣೆ, ಆಸ್ತಿಪಾಸ್ತಿಯ ರಕ್ಷಣೆಗೆ ಕೂಡಲೇ ನಿರ್ಣಯಗಳನ್ನುಯ ಕೈಗೊಳ್ಳಲು, ಅದಕ್ಕೆ ಸರಕಾರದ, ಪಾಲಿಕೆಯ ಅನುಮೋದನೆ ಪಡೆಯಬೇಕು. ಆರೋಗ್ಯಾಧಿಕಾರಿಗಳು, ಎಂಜಿನಿಯರ್, ಕಂದಾಯಾಧಿಕಾರಿಗಳು ಅಥವಾ ಇತರ ಅಧಿಕಾರಿಗಳಿಗೆ ಲಿಖಿತ ಆದೇಶ ನೀಡಬಹುದು.

(2) ನಗರಪಾಲಿಕೆಗೆ ಸಂಬಂಧಿಸಿದ ಎಲ್ಲ ನಿಯಮಾವಳಿಗಳ ಜಾರಿ ಆಯುಕ್ತರಿಗೆ ಸೇರುತ್ತದೆ.

(3) ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ, ತಮ್ಮ ನಿಯಂತ್ರಣ, ಪರಿಶೀಲನೆ, ಉಸ್ತುವಾರಿಯಲ್ಲಿ ನಿಗದಿತ ಚಟುವಟಿಕೆಗಳನ್ನು ನಡೆಸುವಂತೆ ಅಧಿಕಾರಿಗೆ ಆಯುಕ್ತರು ಆದೇಶಿಸಬಹುದು.

(4) ರಾಜ್ಯ ಸರಕಾರದ ಆದೇಶಗಳ ಅನುಷ್ಠಾನಕ್ಕೆ ಅಧಿಕಾರಿಯನ್ನು ನಿಯೋಜಿಸಬಹುದು.

(5) ಸರಕಾರ ಮತ್ತು ಪಾಲಿಕೆ ಅಥವಾ ಇತರ ಇಲಾಖೆಗಳೊಡನೆ ಪಾಲಿಕೆಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಎಲ್ಲ ಕರ್ತವ್ಯಗಳನ್ನು ಆಯುಕ್ತರು ನಿರ್ವಹಿಸುತ್ತಾರೆ. ಅದರ ದಾಖಲೆಯ ಪ್ರತಿಗಳನ್ನು ಆಯುಕ್ತರು ಮೇಯರ್‌ಗೆ ಸಲ್ಲಿಸಬೇಕು.

(6) ನಗರಪಾಲಿಕೆಯ ಎಲ್ಲ ದಾಖಲೆಗಳಿಗೆ ಆಯುಕ್ತರು ಜವಾಬ್ದಾರಿಯಾಗಿರುತ್ತಾರೆ.

ಪರಿಚ್ಛೇದ 48– ನಗರಪಾಲಿಕೆ ವ್ಯವಸ್ಥೆಯ ಮೇಲಿನ ನಿಯಂತ್ರಣ

ಕಾಯಿದೆಯ ಅನ್ವಯ ಆಯುಕ್ತರು ನಗರಪಾಲಿಕೆ ವ್ಯವಸ್ಥೆಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಅಧಿಕಾರವನ್ನು ನಿರ್ವಹಿಸುತ್ತಾರೆ. ಯೋಜನೆಗಳ ಉಸ್ತುವಾರಿ, ಪರಿವೀಕ್ಷಣೆ ನಡೆಸುತ್ತಾರೆ.

ಪರಿಚ್ಛೇದ 49– ಪುರಪಿತೃಗಳ ಅಧಿಕಾರ

(1) ನಗರಪಾಲಿಕೆಯ ಚಟುವಟಿಕೆಗಳಲ್ಲಿ ನಿರ್ಲಕ್ಷ ಕಂಡುಬಂದಲ್ಲಿ ಪಾಲಿಕೆಯ, ಆಯುಕ್ತರ ಗಮನ ಸೆಳೆಯಬಹುದು. ಸಲಹೆಗಳನ್ನು ನೀಡಬಹುದು

(2) ಕಾಯಿದೆಯ ಅನ್ವಯ ನಗರಪಾಲಿಕೆಯ ಆಡಳಿತದ ಎಲ್ಲ ಹಂತಗಳ ಮಾಹಿತಿ ಪಡೆದು ಸಮಾಲೋಚನೆ ನಡೆಸುವ ಹಕ್ಕು ಪುರಪಿತೃವಿಗೆ ಇದೆ.

ಅಧ್ಯಾಯ–6–ಕಲಾಪ

ಪರಿಚ್ಛೇದ 50– ನಗರಪಾಲಿಕೆ ಮತ್ತು ಸ್ಥಾಯಿ ಸಮಿತಿಯ ಕಲಾಪ

(1) ಸಾಮಾನ್ಯ ಚುನಾವಣೆಯ ನಂತರ ನಗರಪಾಲಿಕೆಯ ಮೊದಲ ಸಭೆ ನಡೆಯುತ್ತದೆ. ಚುನಾವಣೆ ಫಲಿತಾಂಶ ಪ್ರಕಟವಾದ ಒಂದು ವಾರದೊಳಗೆ ಈ ಸಭೆ ನಡೆಯಬೇಕು. ಆಯುಕ್ತರು ಇದರ ಅಧ್ಯಕ್ಷತೆ ವಹಿಸುತ್ತಾರೆ.

(2) ನಗರಪಾಲಿಕೆಯ ಕಚೇರಿಯಲ್ಲಿ ಸ್ಥಾಯಿ ಸಮಿತಿಗಳ ಸಭೆ ನಡೆಯುತ್ತದೆ. ಪಾಲಿಕೆಯ ಕಾರ್ಯದರ್ಶಿ ಸಭೆಗೆ ಮುನ್ನ ಸೂಚನೆ ನೀಡುತ್ತಾರೆ. ನಗರಪಾಲಿಕೆಯ ಸಭೆಯೂ ಇದೇ ರೀತಿಯಲ್ಲಿ ನಡೆಯುತ್ತದೆ.

(3) ನಗರಪಾಲಿಕೆಯ ಕಲಾಪಗಳಲ್ಲಿ ಅಗತ್ಯ ಬಿದ್ದರೆ ಅಂತಹ ಅಧಿಕಾರಿಗಳೂ ಭಾಗವಹಿಸುತ್ತಾರೆ.

( 4) ಬ್ಯಾಲೆಟ್ ಪದ್ಧತಿಯಲ್ಲಿ ಮತದಾನ ನಡೆಯುತ್ತದೆ. ಧ್ವನಿ ಮತದ ಮೂಲಕವಲ್ಲ.

ಪರಿಚ್ಛೇದ 51– ನಿರ್ಣಯಗಳ ಜಾರಿ ಮತ್ತು ಅಧಿಕಾರಿಗಳ ಬದ್ಧತೆ

ಕಾಯಿದೆಯ ಅಡಿಯಲ್ಲಿ ರಚನೆಯಾಗಿರುವ ಸಮಿತಿಗಳು ಕೈಗೊಂಡ ನಿರ್ಣಯಗಳ ಜಾರಿಯ ಹೊಣೆಗಾರಿಕೆ ಆಯುಕ್ತರಿಗೆ

ಸೇರುತ್ತದೆ.

ಪರಿಚ್ಛೇದ 52– ಸ್ಥಾಯಿ ಸಮಿತಿಯ ಕಲಾಪ ಮತ್ತು ನಗರಪಾಲಿಕೆ

ನಗರ ಪಾಲಿಕೆಯು ಕಾಯಿದೆಯ ಅಡಿಯಲ್ಲಿ ಯಾವುದೇ ಸಮಯದಲ್ಲಿ ಯಾವುದೇ ಸ್ಥಾಯಿ ಸಮಿತಿಯ ಸಭೆಯನ್ನು ಕರೆಯಬಹುದು. ಹೇಳಿಕೆಯನ್ನು ಪಡೆಯಬಹುದು. ವರದಿಯನ್ನು ನಿರೀಕ್ಷಿಸಬಹುದು.

ಪರಿಚ್ಛೇದ 53– ಆಯುಕ್ತರಿಂದ ದಾಖಲಾತಿ, ವರದಿ ಕೋರಿಕೆ

ಕಾಯಿದೆಯ ಅನುಸಾರ ನಗರಪಾಲಿಕೆ, ಸ್ಥಾಯಿ ಸಮಿತಿ, ವಾರ್ಡ್ ಅಥವಾ ನೆರೆಹೊರೆಯ ಪ್ರದೇಶ ಸಮಿತಿಯು ಆಯುಕ್ತರಿಂದ ಯಾವುದೇ ದಾಖಲೆ, ಯೋಜನಾ ವರದಿ, ಅಂದಾಜು, ಹೇಳಿಕೆಯನ್ನು ನಿರೀಕ್ಷಿಸಬಹುದು.

ಪರಿಚ್ಛೇದ 54– ಇತರ ಸ್ಥಳೀಯ ಅಧಿಕಾರಿಗಳ ಜತೆ ಸಂಯೋಜನೆ

(1) ಅಗತ್ಯ ಬಿದ್ದರೆ ಸ್ಥಳೀಯ ಆಡಳಿತ ಮಂಡಳಿಯ ಅಧಿಕಾರಿಗಳ ಜತೆ ಜಂಟಿಯಾಗಿ ನಗರಪಾಲಿಕೆಯ ಅಧಿಕಾರಿಗಳು ಕಾರ್ಯನಿರ್ವಹಿಸಬಹುದು. ಇದಕ್ಕಾಗಿ ಜಂಟಿ ಸಮಿತಿಯನ್ನು ರಚಿಸಲು ಕಾಯಿದೆಯ ಅಡಿಯಲ್ಲಿ ಅವಕಾಶ ಇದೆ. ಅಂತಹ ಸಮಿತಿಗೆ ಅಧ್ಯಕ್ಷರೊಬ್ಬರನ್ನು ನೇಮಿಸಲಾಗುತ್ತದೆ. ಒಂದು ವೇಳೆ ಸ್ಥಳೀಯಾಡಳಿತ ಮಂಡಳಿಗಳು ಇದಕ್ಕೆ ಒಪ್ಪದಿದ್ದಲ್ಲಿ ಸರಕಾರ ಈ ಸಂಬಂಧ ಸೂಕ್ತ ಆದೇಶ ಹೊರಡಿಸಬಹುದು. ಒಂದು ವೇಳೆ ಸ್ಥಳೀಯಾಡಳಿತ ಮಂಡಳಿ ಹಾಗೂ ನಗರಪಾಲಿಕೆ ನಡುವೆ ಭಿನ್ನಮತ ಕಾಣಿಸಿದಲ್ಲಿ ಸರಕಾರ ಈ ಬಗ್ಗೆ ಕೈಗೊಳ್ಳುವ ನಿರ್ಧಾರ ಅಂತಿಮವಾಗುತ್ತದೆ.

ಪರಿಚ್ಛೇದ 55– ನಗರಪಾಲಿಕೆಯ ಕಲಾಪ ಇತ್ಯಾದಿ..

ನಗರಪಾಲಿಕೆ ಅಥವಾ ಸ್ಥಾಯಿ ಸಮಿತಿಯಲ್ಲಿ ಸ್ಥಾನ ತೆರವಾಗಿದ್ದಾಗ ಕಲಾಪ ನಡೆಯುವಂತಿಲ್ಲ. ನಗರಪಾಲಿಕೆ ಮತ್ತು ಸ್ಥಯಿ ಸಮಿತಿಯ ಕಲಾಪಗಳನ್ನು ಪಾಲಿಕೆಯ ಕಾರ್ಯದರ್ಶಿಗಳು ದಾಖಲಿಸಬೇಕು. ಹಾಗೂ ಮುಂದಿನ ಕಲಾಪದಲ್ಲಿ ದೃಢೀಕರಣ ಮಾಡಬೇಕು. ಸ್ಥಾಯಿ ಸಮಿತಿಯ ಕಲಾಪಗಳು ಕಾಯಿದೆಯ ಬದ್ಧತೆಯನ್ನು ಹೊಂದಿರಬೇಕು. ಅವ್ಯವಹಾರಕ್ಕೆ ಆಸ್ಪದವಿರಕೂಡದು.

ಪರಿಚ್ಛೇದ 56– ಆಯುಕ್ತರಿಗೆ ಚರ್ಚೆಯಲ್ಲಿ ಭಾಗವಹಿಸುವ ಅವಕಾಶ, ನಿರ್ಣಯದ ಮತದಾನದಲ್ಲಿಲ್ಲ

(1) ಆಯುಕ್ತರು ನಗರಪಾಲಿಕೆಯ ಸಭೆಯಲ್ಲಿ ನಡೆಯುವ ಚರ್ಚೆಯಲ್ಲಿ ಭಾಗವಹಿಸಬಹುದು. ಆದರೆ ನಿರ್ಣಯ ಮಂಡನೆಯಲ್ಲಿ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.

(2) ಅಗತ್ಯ ಬಿದ್ದಾಗ ಆಯುಕ್ತರು ಸ್ಥಾಯಿ ಸಮಿತಿಯ ಸಭೆಗಳಲ್ಲಿ ಭಾಗವಹಿಸಬಹುದು

ಪರಿಚ್ಛೇದ 57 – ನಗರಪಾಲಿಕೆ ಸದಸ್ಯರು ಮತ್ತು ಚರ್ಚೆ

(1) ನಗರಪಾಲಿಕೆ ಸದಸ್ಯರು ಚರ್ಚೆಯಿಂದ ದೂರ ಉಳಿಯುವಂತಿಲ್ಲ. ಮತದಾನದಿಂದ ದೂರ ಇರುವಂತಿಲ್ಲ. ಆದರೆ ಅಗತ್ಯ ಬಿದ್ದರೆ ಮನವಿ ಸಲ್ಲಿಸಿ ಚರ್ಚೆಗೆ ಬರದಿರಬಹುದು.

(2) ನಗರಪಾಲಿಕೆ ಸದಸ್ಯರು ನಿರ್ಣಯವನ್ನು ಪ್ರಶ್ನಿಸಬಹುದು. ಆಗ ನಿರ್ಣಯವನ್ನು ಮತಕ್ಕೆ ಹಾಕಿ ಅಂತಿಮ ನಿರ್ಧಾರಕ್ಕೆ ಬರಲಾಗುತ್ತದೆ.

ಪರಿಚ್ಛೇದ 58– ಸರಕಾರಕ್ಕೆ ವರದಿ ಸಲ್ಲಿಕೆ

(1) ಪ್ರತಿ ವರ್ಷ ಏಪ್ರಿಲ್ 1ರ ನಂತರ ಸಾಧ್ಯವಾದಷ್ಟು ಶೀಘ್ರ ನಗರ ಪಾಲಿಕೆಯು ಸರಕಾರಕ್ಕೆ ವಿವರವಾದ ಆಡಳಿತಾತ್ಮಕ ವರದಿ ಸಲ್ಲಿಸಬೇಕು. ವರದಿ ಸಲ್ಲಿಸುವಂತೆ ಸರಕಾರ ನಿರ್ದೇಶಿಸಬಹುದು

(2) ಆಯುಕ್ತರು ಸಿದ್ಧಪಡಿಸುವ ವರದಿಯನ್ನು ಸರಕಾರಕ್ಕೆ ಸಲ್ಲಿಸಲಾಗುತ್ತದೆ.

(3) ವರದಿಯ ಪ್ರತಿಗಳು ನಗರಪಾಲಿಕೆ ಕಚೇರಿಯಲ್ಲಿ ಲಭ್ಯವಿರುತ್ತವೆ.

ಪರಿಚ್ಛೇದ 59– ನೇಮಕ ಮತ್ತು ಸೇವೆಯ ನಿಯಮಾವಳಿಗಳು

ಕರ್ನಾಟಕ ನಗರಪಾಲಿಕೆ ಕಾಯಿದೆ, 1976ರ ಪ್ರಕಾರ ನಗರಪಾಲಿಕೆಗೆ ನೇಮಕ ಪ್ರಕ್ರಿಯೆ ನಡೆಯುತ್ತದೆ.

ಪರಿಚ್ಛೇದ 60– ಸರಕಾರದ ಅಧಿಕಾರ ಮತ್ತು ತೆರಿಗೆ ಪಟ್ಟಿ

ಕರ್ನಾಟಕ ನಗರಪಾಲಿಕೆ ಕಾಯಿದೆ, 1976ರ ಪ್ರಕಾರ ನಗರಪಾಲಿಕೆಯ ಕನಿಷ್ಠ ಸೇವೆ, ಅಧಿಕಾರ, ಸರಕಾರದ ಮೇಲ್ವಿಚಾರಣೆ, ತೆರಿಗೆ ಪದ್ಧತಿ ನಡೆಯುತ್ತದೆ.

ಪರಿಚ್ಛೇದ 61– ಹಣಕಾಸು

ಕರ್ನಾಟಕ ನಗರಪಾಲಿಕೆ ಕಾಯಿದೆ, 1976ರ ಪ್ರಕಾರ ಹಣಕಾಸು, ಲೆಕ್ಕ ಪತ್ರ ಪರಿಶೋಧನೆ ನಡೆಯುತ್ತದೆ.

ಅಧ್ಯಾಯ 7– ಆಸ್ತಿ, ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ನಿರ್ವಹಣೆ

ಪರಿಚ್ಛೇದ 62– ಭೂ ಅಭಿವೃದ್ಧಿ ಬ್ಯಾಂಕ್ ನಿರ್ವಹಣೆ

(1) ಕಾಯಿದೆಯ ಅನ್ವಯ ನಗರಪಾಲಿಕೆ ತನ್ನ ವ್ಯಾಪ್ತಿಯ ಎಲ್ಲ ಆಸ್ತಿಯ ವಿವರಗಳನ್ನು ದಾಖಲಿಸಬೇಕು

(2) ಸಮಸ್ತ ಭೂ ದಾಖಲೆಗಳನ್ನು ವಾರ್ಷಿಕ ಆಧಾರದಲ್ಲಿ ಪರಿಷ್ಕರಿಸಬೇಕು

(3) ಭೂ ಹಾಗೂ ಆಸ್ತಿ ದಾಖಲೆಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ವೆಬ್‌ಸೈಟ್‌ನಲ್ಲಿಯೂ ಮಾಹಿತಿ ಸಿಗುವಂತೆ ನೋಡಿಕೊಳ್ಳಬೇಕು.

## ಪರಿಚ್ಛೇದ 63– ಭೂ ಸ್ವಾಧೀನ ಕಾಯಿದೆ

ಭೂ ಸ್ವಾಧೀನ ಕಾಯಿದೆಯ ಅಡಿಯಲ್ಲಿ ಆಯುಕ್ತರು ನಗರಪಾಲಿಕೆಯ ಪರವಾಗಿ ಸ್ಥಿರಾಸ್ತಿಯನ್ನು ನಗರದ ಒಳಗೆ ಅಥವಾ ಹೊರಗೆ ಸ್ವಾಧೀನಪಡಿಸಿಕೊಳ್ಳಬಹುದು.

ಕಾಯಿದೆಯಲ್ಲಿ ಉಪಲಬ್ಧವಿರುವ ಅವಕಾಶ–

(ಎ) ದರ ನಿಗದಿ, ನಿಗದಿತ ಪ್ರಕರಣದಲ್ಲಿ ಗರಿಷ್ಠ ದರ ನಿಗದಿ ಮುಂತಾದ ವಿಚಾರದಲ್ಲಿ ಆಯುಕ್ತರು ಸ್ಥಾಯಿ ಸಮಿತಿಯ ಕೈಗೊಳ್ಳುವ ನಿರ್ಧಾರಕ್ಕೆ ಬದ್ಧರಾಗಿರಬೇಕು.

(ಬಿ) ಯಾವುದೇ ಸ್ಥಿರಾಸ್ತಿಯನ್ನು 12 ತಿಂಗಳು ಮೀರಿದ ಅವಧಿಗೆ ಭೋಗ್ಯಕ್ಕೆ ಕೊಳ್ಳಲು, ಸ್ಥಾಯಿ ಸಮಿತಿಯ ಮಂಜೂರಾತಿ ಅಗತ್ಯ.

(ಸಿ) ನಗರಪಾಲಿಕೆ ಮತ್ತು ಸರಕಾರದ ಅನುಮತಿ ಭೂ ಸ್ವಾಧೀನಕ್ಕೆ ಅಗತ್ಯ. ಸ್ಥಿರಾಸ್ತಿಯನ್ನು ಭೋಗ್ಯಕ್ಕೆ ಪಡೆದುಕೊಳ್ಳಲು, ಯಾವುದೇ ಉಡುಗೊರೆ ಸ್ವೀಕರಿಸಲು ಅನುಮತಿ ಅಗತ್ಯ

## ಪರಿಚ್ಛೇದ 64– ಆಸ್ತಿ ಪ್ರಕರಣ ಇತ್ಯರ್ಥ

(1) ಕಾಯಿದೆಯ ಅನ್ವಯ ಆಯುಕ್ತರು ನಗರಪಾಲಿಕೆಯ ಚರಾಸ್ತಿಯನ್ನು ನಿಗದಿತ ಮೊತ್ತಕ್ಕೆ ನಿಗದಿತ ಅವಧಿಯಲ್ಲಿ ಮರಾಟ ಇಲ್ಲವೇ ವಿನಿಮಯ ಮಾಡಿಕೊಳ್ಳಬಹುದು.

ಈ ಕುರಿತ ಪ್ರತಿಯೊಂದು ವಹಿವಾಟಿನ ಪ್ರಕ್ರಿಯೆಯನ್ನು ಸ್ಥಾಯಿ ಸಮಿತಿಗೆ ಆಯುಕ್ತರು ಆಯುಕ್ತರು ಒಪ್ಪಿಸಬೇಕು

(2) ನಗರಪಾಲಿಕೆಯ ಮಂಜೂರಾತಿ ಪಡೆದು ಆಯುಕ್ತರು ನಗರಪಾಲಿಕೆಯ ಯಾವುದೇ ಚರಾಸ್ತಿಯನ್ನು ವಿನಿಮಯ ಅಥವಾ ಮಾರಾಟ ಮಾಡಬಹುದು.ಪ್ರತಿಯೊಂದು ಪ್ರಕರಣದಲ್ಲಿಯೂ ಅದರ ಬೆಲೆ 5 ಸಾವಿರ ರೂ. ಮೀರಕೂಡದು. ಯಾವುದೇ ಆಸ್ತಿಯನ್ನು ಮೂರು ವರ್ಷಕ್ಕೂ ಮೀರಿ ಭೋಗ್ಯಕ್ಕೆ ನೀಡಬಾರದು.

(3) ನಗರಪಾಲಿಕೆಯ ಮಂಜೂರಾತಿ ಪಡೆದು ಆಯುಕ್ತರು ನಗರಪಾಲಿಕೆಯ ಯಾವುದೇ ಚರಾಸ್ತಿಯನ್ನು ಭೋಗ್ಯಕ್ಕೆ ನೀಡಬಹುದು, ಅಥವಾ ಮಾರಾಟ ಮಾಡಬಹುದು

(4) ಸ್ಥಾಯಿ ಸಮಿತಿಯು ಉಪ–ಅಧಿ ನಿಯಮ (2) ಅಥವಾ ಉಪ ಅಧಿ ನಿಯಮ–3ರ ಅಡಿಯಲ್ಲಿ ಯಾವುದೇ ವರ್ಗದ ಪ್ರಕರಣವನ್ನು ವಿಲೇವಾರಿ ಮಾಡಬಹುದು

(5) ಆಯುಕ್ತರು ನಗರಪಾಲಿಕೆಯ ಚರಾಸ್ತಿಯನ್ನು ನಿಬಂಧನೆಗಳ ಅನ್ವಯ ಸಾಲವಾಗಿ ನೀಡಲು ಅಥವಾ ವಿಲೇವಾರಿ ಮಾಡಬಹುದು

(6) ಹೀಗಿದ್ದರೂ ಕಾಯಿದೆಯಲ್ಲಿರುವ ಅಂಶಗಳು–
(ಎ) ನಿಗದಿತ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯದ ನಗರಪಾಲಿಕೆ ಚರಾಸ್ತಿಯನ್ನು ಸಾರ್ವಜನಿಕ ಹರಾಜು ಮೂಲಕ ಇತ್ಯರ್ಥಗೊಳಿಸಬಹುದು

**ಪರಿಚ್ಛೇದ –65– ಭೂ ಸ್ವಾಧೀನ ಕಾಯಿದೆ–1894ರ ಅಡಿಯಲ್ಲಿ ಸ್ಥಿರಾಸ್ತಿ ಸ್ವಾಧೀನದ ಪ್ರಕ್ರಿಯೆ**

ಯಾವುದೇ ನಗರಪಾಲಿಕೆ ಭೂ ಸ್ವಾಧೀನ ಕಾಯಿದೆ–1894ರ ಅಡಿಯಲ್ಲಿ ಸ್ಥಿರಾಸ್ತಿ ಸ್ವಾಧೀನದ ಪ್ರಕ್ರಿಯೆಗೆ ಮುಂದಾಗಬಹುದು. ಹಾಗೂ ನಂತರ ಸಂಬಂಧಪಟ್ಟವರಿಗೆ ಪರಿಹಾರವನ್ನು ನೀಡಬೇಕಾಗುತ್ತದೆ. ಇದೆಲ್ಲವೂ ನಗರಪಾಲಿಕೆಗೆ ಸೇರಿದ ಹೊಣೆಗಾರಿಕೆಯಾಗುತ್ತದೆ.

**ಪರಿಚ್ಛೇದ 66– ಭೂ ಸ್ವಾಧೀನ ಕಾಯಿದೆ–1894ರ ಅಡಿಯಲ್ಲಿ ಭೂಮಿಗೆ ಮತ್ತು ಇತರ ಆಸ್ತಿಗೆ ಸಂಬಂಧಿಸಿದ ನಿಬಂಧನೆ**

(1) ಸರಕಾರದಿಂದ ನಗರಪಾಲಿಕೆಗೆ ವರ್ಗಾವಣೆಯಾಗುವಯಾವುದೇ ಸ್ಥಿರಾಸ್ತಿಯ ಮಾಲೀಕತ್ವವನ್ನು ನಗರಪಾಲಿಕೆಗೆ ವರ್ಗಾವಣೆ ಮಾಡಬೇಕಾಗುತ್ತದೆ.

(2) ಸರಕಾರ ಅಧಿಸೂಚನೆಯ ಮೂಲಕ ಹಾಗೂ ನಗರಪಾಲಿಕೆಯ ಜತೆ ಸಮಾಲೋಚನೆಯ ಮೂಲಕ ಸಾರ್ವಜನಿಕ ಉದ್ದೇಶಕ್ಕೆ ಸ್ಥಿರಾಸ್ತಿ ಅಥವಾ ಚರಾಸ್ತಿಯನ್ನು ಪಾಲಿಕೆಗೆ ವರ್ಗಾಯಿಸಲು ನಿರ್ಧರಿಸಬಹುದು.

**ಪರಿಚ್ಛೇದ 67– ನಗರಪಾಲಿಕೆಯಿಂದ ಅಥವಾ ವಿರುದ್ಧ ಆಸ್ತಿ ಘೋಷಣೆಯ ನಿರ್ಧಾರ**

(1) ಯಾವುದೇ ನಗರದಲ್ಲಿ ಜಮೀನಿನ ಸರ್ವೆ ನಡೆಸಿ ಕೃಷಿ ಉದ್ದೇಶಕ್ಕೆಂದು ಬಳಸಿದ್ದಲ್ಲಿ, ಯಾವುದೇ ಕಾನೂನಿನ ಅಡಿ ಮುಂದುವರಿದಿದ್ದಲ್ಲಿ, ನಗರಪಾಲಿಕೆಯ ವತಿಯಿಂದ ಆಸ್ತಿ ಖರೀದಿಸಿದ್ದಲ್ಲಿ, ನಗರಪಾಲಿಕೆಯ ವಿರುದ್ಧ ಯಾರಾದರೂ ಅರ್ಜಿ ಸಲ್ಲಿಸಿದ್ದಲ್ಲಿ ಆಯಾ ಕಂದಾಯ ವಲಯದ ಉಪ ವಿಭಾಗಾಧಿಕಾರಿಯವರು ತನಿಖೆ ನಡೆಸಬಹುದು

(2) ಯಾವುದೇ ವ್ಯಕ್ತಿಗೆ ತೊಂದರೆಯಾಗಿದ್ದಲ್ಲಿ ಉಪ ಅಧಿನಿಯಮ (1)ರ ಅಡಿಯಲ್ಲಿ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಮೊರೆ ಹೋಗಬಹುದು. ಹಾಗೂ ನ್ಯಾಯಾಧಿಕರಣದ ತೀರ್ಪೇ ಅಂತಿಮ.

**ಪರಿಚ್ಛೇದ 68– ಆಡಳಿತ ಮತ್ತು ಅಧಿಕಾರದ ವರ್ಗಾವಣೆ**

(2) ಸರಕಾರ ನಗರಪಾಲಿಕೆಯ ಸಮ್ಮತಿ ಪಡೆದು ಯಾವುದೇ ಸಂಸ್ಥೆ ಅಥವಾ ನಿರ್ವಹಣೆಯನ್ನು ವರ್ಗಾಯಿಸಬಹುದು

**ಪರಿಚ್ಛೇದ 69– ಗುತ್ತಿಗೆಗೆ ಸಂಬಂದಿಸಿದ ಸಾಮಾನ್ಯ ನಿಬಂಧನೆಗಳು**

(1) ಗುತ್ತಿಗೆ ಆಧಾರದಲ್ಲಿ ಯಾವುದೇ ಯೋಜನೆಯನ್ನು ಕೈಗೊಳ್ಳಬೇಕೇ ಬೇಡವೇ ಎಂಬುದನ್ನು ನಗರಪಾಲಿಕೆ ನಿರ್ಧರಿಸುತ್ತದೆ.

(2) ಕಾಇದೆಯಡಿಯಲ್ಲಿ ಅಗತ್ಯ ಕಂಡುಬಂದಲ್ಲಿ ನಗರಪಾಲಿಕೆ ಗುತ್ತಿಗೆ ಪದ್ಧತಿಯನ್ನು ಅವಲಂಬಿಸಬಹುದು.

(3) ಗುತ್ತಿಗೆ ಪದ್ಧತಿಯಲ್ಲಿ ಕೆಳಕಂಡ ಅಂಶಗಳು ಅನ್ವಯವಾಗುತ್ತವೆ–

(ಎ) ಪ್ರತಿಯೊಂದು ಗುತ್ತಿಗೆಯನ್ನೂ ಆಯುಕ್ತರು ನಗರಪಾಲಿಕೆಯ ಪರವಾಗಿ ನಿರ್ವಹಿಸುತ್ತಾರೆ.

(ಬಿ) ನಗರಪಾಲಿಕೆ ಅಥವಾ ಸರಕಾರದ ಅನುಮತಿ ಇಲ್ಲದೆ ಆಯುಕ್ತರು ಗುತ್ತಿಗೆಗೆ ಮಂಜೂರಾತಿ ನೀಡುವಂತಿಲ್ಲ.

4. ಈ ನಿಬಂಧನೆಗಳು ಗುತ್ತಿಗೆಯ ಸ್ವರೂಪವನ್ನು ಅಧರಿಸಿ ಮಾರ್ಪಾಟುಗಳನ್ನು ಒಳಗೊಳ್ಳಲು ಅವಕಾಶವಿದೆ.

5. ಪ್ರತಿಯೊಂದು ಗುತ್ತಿಗೆಯನ್ನೂ ಆಯುಕ್ತರು ನಗರಪಾಲಿಕೆಯ ಪರ ನಿರ್ವಹಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಕೆಲವು ಅಂಸಗಳಿವೆ–

(ಎ) ಖಾಸಗಿ ವ್ಯಕ್ತಿ, ಸಂಸ್ಥೆಗಳಿಗೆ ಸೇರಿದಂತೆಪ್ರತಿಯೊಂದು ಗುತ್ತಿಗೆಯಲ್ಲಿಯೂ ನಗರಪಾಲಿಕೆಯ ಮುದ್ರೆ ಇರುತ್ತದೆ.

(ಬಿ) ಯಾವುದೇ ಗುತ್ತಿಗೆಯ ವೆಚ್ಚ 1 ಸಾವಿರ ರೂ.ಗಿಂತ ಅಧಿಕ ಇದ್ದರೆ ವೆಚ್ಚದ ಲಿಖಿತ ದಾಖಲೆ ಇರಬೇಕು. ನಗರಪಾಲಿಕೆಯ ಮುದ್ರೆ ಇರಬೇಕು. ಸಾಮಾನ್ಯವಾಗಿ ನಗರಪಾಲಿಕೆಯ ಮುದ್ರೆ–

(1) ಕೆಲಸ ನಡೆದ ಮೇಲೆ ಅಥವಾ ಬೇಕಾದ ವಸ್ತು, ಸಾಮಗ್ರಿಗಳು ಪೂರೈಕೆಯಾದಾಗ

(2) ಕೆಲಸಗಳಿಗ, ವಸ್ತು, ಸಾಮಗ್ರಿಗಳಿಗೆ ಶುಲ್ಕ ಪಾವತಿಸಿದಾಗ

(3) ಗುತ್ತಿಗೆಯ ಕೆಲಸದಲ್ಲಿ, ನಿಗದಿತ ಕೆಲಸ ಕಾರ್ಯಗಳಿಗೆ, ನಿಗದಿತ ಹಂತಗಳಲ್ಲಿ ಹಾಗೂ ಕೆಲಸ ಪೂರ್ಣವಾದಾಗ ಬೇಕಾಗುತ್ತದೆ.

(6) ನಗರಪಾಲಿಕೆಯ ಸಾಮಾನ್ಯ ಮುದ್ರೆ ಆಯುಕ್ತರ ವಶದಲ್ಲಿ ಇರುತ್ತದೆ.ಗುತ್ತಿಗೆಯ ಪ್ರಕ್ರಿಯೆ ಆಯುಕ್ತರ ಸಮ್ಮುಖದಲ್ಲಿ ನಡೆಯಬೇಕು. ಆಯುಕ್ತರ ಸಹಿ ಇರಬೇಕು.
(7) ನಗರಪಾಲಿಕೆಯ ನಿಯಮಾವಳಿಗೆ ಬದ್ಧತೆಯಿಲ್ಲದ ಹೊರತಾಗಿ ಗುತ್ತಿಗೆ ನಡೆಯುವುದಿಲ್ಲ.

## ಅಧ್ಯಾಯ 8

**ನೀರು ಸರಬರಾಜು ಮತ್ತು ಒಳ ಚರಂಡಿ**

ಪರಿಚ್ಛೇದ– 70– ಅಧೀಕ್ಷಣೆಯ ಅಧಿಕಾರ

(1) ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಕಾಯಿದೆ , 1964ರ ಅನ್ವಯ ಬೆಂಗಳೂರಿನ ನೀರು ಸರಬರಾಜು ಪೂರೈಕೆ ಮತ್ತು ಒಳ ಚರಂಡಿ ಮಂಡಳಿಯ ಅಧೀಕ್ಷಕ ಅಧಿಕಾರ ಮೇಯರ್ ಅವರಿಗೆ ಇದೆ.
(2) ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಕಾಯಿದೆ , 1964ರ ಅನ್ವಯಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯಿಂದ ನಿಯಮಿತವಾಗಿ ವರದಿಗಳನ್ನು ತರಿಸಿಕೊಂಡು ಪರಿಶೀಲಿಸುವ ಅಧಿಕಾರ ಹೊಂದಿದ್ದಾರೆ.
(3) ನೀರು ಸರಬರಾಜು ಮತ್ತು ಒಳ ಚರಂಡಿಗೆ ಸಂಬಂದಿಸಿ ಕರ್ನಾಟಕ ನಗರಪಾಲಿಕೆ ಕಾಯಿದೆ 1976ರ 13ನೇ ಅಧ್ಯಾಯದ ನಿಯಮಾವಳಿಗಳು ಅನ್ವಯವಾಗುತ್ತವೆ.

## ಅಧ್ಯಾಯ 9– ಬೀದಿಗಳು

ಪರಿಚ್ಛೇದ– 71– ಕರ್ನಾಟಕ ನಗರಪಾಲಿಕೆ ಕಾಯಿದೆ ಅನ್ವಯ : ಕರ್ನಾಟಕ ನಗರಪಾಲಿಕೆ ಕಾಯಿದೆ, 1976ರ 15ನೇ ಕಾಯಿದೆಯ ಅನ್ವಯ ಸಾರ್ವಜನಿಕ ಹಾಗೂ ಖಾಸಗಿ ರಸ್ತೆಗಳ ನಿಯಂತ್ರಣದ ಅಧಿಕಾರ ನಗರಪಾಲಿಕೆ ವ್ಯಾಪ್ತಿಗೆ ಸೇರುತ್ತದೆ.

## ಅಧ್ಯಾಯ 10– ದಂಡ

( ಈ ಆಧ್ಯಾಯದಲ್ಲಿ ಜುಲ್ಮಾನೆಗೆ ಸಂಬಂದಿಸಿದಂತೆ ವಿವರಣೆಗಳಿವೆ. ದಂಡ ವಿಧಿಸುವ ಸಂಬಂಧ ವಿಸ್ತೃತ ಸಮಾಲೋಚನೆ ಅಗತ್ಯ. ಪ್ರಸಕ್ತ ಅಧ್ಯಾಯದಲ್ಲಿ ಜುಲ್ಮಾನೆಗೆ ಕಾರಣವಾಗುವ ಅಂಶಗಳನ್ನು ತಿಳಿಸಲಾಗಿದೆ.
ದಾಖಲು ಪ್ರಕ್ರಿಯೆಯಲ್ಲಿ ನ್ಯೂನತೆ ;
ನಗರಪಾಲಿಕೆ ಸದಸ್ಯ ಇತ್ಯಾದಿ ತಪ್ಪು ನಿರೂಪಣೆ
ಪರವಾನಗಿ ಪಡೆಯುವಲ್ಲಿ ಲೋಪ
ಕಾನೂನುಬಾಹಿರ ಕಟ್ಟಡಗಳಿಗೆ ದಂಡ
ಭೂಮಿಯ ಒತ್ತುವರಿ ಮತ್ತು ದುರ್ಬಳಕೆ
ನಗರಪಾಲಿಕೆ ಆಸ್ತಿಯ ದುರುಪಯೋಗಕ್ಕೆ ದಂಡ

## ಅಧ್ಯಾಯ 11– ಅನುಬಂಧ

ಕರ್ನಾಟಕ ನಗರಪಾಲಿಕೆ ಕಾಯಿದೆ, 1976ರ ಪ್ರತಿಬಂಧಕಾಜ್ಞೆ ಅನ್ವಯ–
ಕರ್ನಾಟಕ ನಗರಪಾಲಿಕೆ ಕಾಯಿದೆ, 1976ರ ಅನ್ವಯ ಕೆಳಕಂಡ ಅಂಶಗಳು ಕಾಯಿದೆಯ ವ್ಯಾಪ್ತಿಗೆ ಬರುತ್ತವೆ.
ಅಧ್ಯಾಯ 16ನ್ನು ಸುವ್ಯವಸ್ಥೆಗೆ ಭಂಗ ಎಂದು ಪರಿಗಣಿಸಲಾಗುವುದು
ಅಧ್ಯಾಯ 17ನ್ನು ಪರವಾನಗಿ ಮತ್ತು ಶುಲ್ಕಕ್ಕೆ ಪರಿಗಣಿಸಲಾಗುವುದು
ಅಧ್ಯಾಯ 18ನ್ನು ಸಾಂಕ್ರಾಮಿಕ ರೋಗಗಳ ತಡೆಗೆ ಪರಿಗಣಿಸಲಾಗುವುದು
ಅಧ್ಯಾಯ 19ನ್ನು ನಿಯಮಾವಳಿಗಳ ಅಧಿಸೂಚನೆ ಮತ್ತು ಪ್ರಕಟಣೆ, ನಗರಪಾಲಿಕೆಯ ಬೈಲಾ ಮತ್ತು ನಿಬಂಧನೆಗಳ

ಪ್ರಕಟಣೆ ಸಂಬಂಧ ಪರಿಗಣಿಸಲಾಗುವುದು
ಅಧ್ಯಾಯ 21ನ್ನು ವಿಭಿನ್ನ ಪ್ರಕ್ರಿಯೆಗೆ ಪರಿಗಣಿಸಲಾಗುವುದು

ಪರಿಚ್ಛೇದ 73– ರದ್ದತಿ ಮತ್ತು ಉಳಿತಾಯ